

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 260 Sunday 23-06-2024 E-mail : maruti.b.hosamani76@gmail.com Page: 4 Price : Rs. 1/-



## ಸ್ಲಂ ಬೋರ್ಡ್ ವಿತರಿಸಿದ ಹಕ್ಕು ಪತ್ರಕ್ಕೆ ನೋಂದಣಿ ಫಾರಂ ನಂ.3ಗೆ ಮುಖ್ಯಮಂತ್ರಿಗಳಿಗೆ ಕರ್ನಾಟಕ ದಲಿತ ರಕ್ಷಣಾ ವೇದಿಕೆ ಒತ್ತಾಯ



**ಹೊಸಪೇಟೆ :** ನಗರದ ನಿರ್ಗತಿಕ ಕಡು ಬಡವ ದೀನ ದಲಿತರಿಗೆ ಅಲ್ಪಸಂಖ್ಯಾತರಿಗೆ ಹಾಗೂ ಹಿಂದುಳಿದ ವರ್ಗದ ಜನಾಂಗದವರಿಗೆ ಸಾವಿರಾರು ಖಾಲಿ ಜಾಗದ ಹಕ್ಕು ಪತ್ರಗಳನ್ನು ನೀಡಿದ್ದು ನೀಡಿದಂತ ಹಕ್ಕು ಪತ್ರಗಳನ್ನು ತೆಗೆದು ಕೊಂಡು ನೋಂದಣಿ ಇಲಾಖೆಗೆ ಹಾಗೂ ನಗರ ಸಭೆಯ ಫಾರಂ ನಂ. 3 ಮಾಡಲಿಕ್ಕೆ ಸುಮಾರು ಫಲಾನುಭವಿ ಜಾಗದ ಹಕ್ಕು ಪತ್ರಗಳ ತೆಗೆದು ಕೊಂಡು ಮಾಡಿಸಿ ಕೊಳ್ಳಲಿಕ್ಕೆ ಹೋದಾಗ ನೋಂದಣಿ ಇಲಾಖೆ ಹಾಗೂ ನಗರ ಸಭೆಯ ಈ ಹಕ್ಕು ಪತ್ರಗಳಿಗೆ ಮಾಡಿ ಕೊಳ್ಳಲಿಕ್ಕೆ ಬರಲ್ಲ ಎಂದು ಅಧಿಕಾರಿಗಳು ಹೇಳಿ ಕಳಿಸುತ್ತಿದ್ದು ಯಾಕೆ ಬರಲ್ಲ ಎಂದು ವಿದ್ಯಾವಂತ ಫಲಾನುಭವಿಗಳು ಪ್ರಶ್ನೆ ಮಾಡಿ ಕೇಳಿದರೆ ಇವುಗಳಿಗೆ ಇನ್ನೂ ಮೇಲಾಧಿಕಾರಿಗಳಿಂದ ಆದೇಶ ಬಂದಿಲ್ಲ ಆದೇಶ ಬರುವವರೆಗೂ ನಾವು ಏನು ಮಾಡಲಿಕ್ಕೆ ಬರಲ್ಲ ಆದೇಶ ಯಾವಾಗ ಬರುತ್ತದೆ ಎಂದು ಕೇಳಿದರೆ ಇನ್ನೂ ಸ್ವಲ್ಪ ದಿನಗಳಲ್ಲಿ ಆದೇಶ ಬರಬಹುದು ಗ್ಯಾರಂಟಿ ಇಲ್ಲ. ಎಂದು ಅಧಿಕಾರಿಗಳು ಹೇಳುತ್ತಾರೆ ಯಾಕೆ ಆದೇಶ ಬೇಕು ಈ ಹಕ್ಕು ಪತ್ರ ಸರ್ಕಾರವೇ ನೀಡಿದ್ದು.

ಸರಕಾರ ನೀಡಿದ ಹಕ್ಕು ಪತ್ರಗಳಿಗೆ ಆದೇಶ ಯಾಕೆ ಬೇಕು ಎಂದು ಪ್ರಶ್ನೆ ಮಾಡಿದರೆ ಅಧಿಕಾರಿಗಳಿಂದ ಉತ್ತರ ನೀಡಲಾರದೆ ಮೌನಕ್ಕೆ ಶರಣರಾಗಿದ್ದಾರೆ ಕೊಳಗೇರಿ ಅಭಿವೃದ್ಧಿ ನಿಗಮದ ಉಪ ವಿಭಾಗ ಎಇಇ ತಿಮ್ಮಣ್ಣ ಇವರ ಆದೇಶ ಇದ್ದರೂ ಸಹ ಆದೇಶವನ್ನು ಮುಚ್ಚಿಟ್ಟು ವಿನಾಕಾರಣ ಮಾಡಿಸಿ ಕೊಡ ಬಾರದೆಂಬ ಮನೋಭಾವನೆಯನ್ನು ಇಟ್ಟು ಕೊಂಡಿದ್ದ-ರಿಂದ ಇನ್ನೂ ಆದೇಶ ಬಂದಿಲ್ಲ ಎಂದು ಉತ್ತರ ನೀಡುತ್ತಿದ್ದರಿಂದ ಇದರ ಬಗ್ಗೆ ಸಂಬಂಧಪಟ್ಟ ಕೊಳಗೇರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಪ್ರಸಾದ ಅಬ್ಬಯ್ಯ ಇವರ ಗಮನಕ್ಕೆ ತಂದು ಮನವಿ ಮಾಡಿ ಕೊಂಡಾಗ ಆದೇಶ ಮಾಡಿ ವರ್ಷಗಳೇ ಕಳೆದಿವೆ ಮತ್ತೆ ಆದೇಶ ಯಾಕೆ ಬೇಕು ಎಂದು ಸಂಬಂಧಪಟ್ಟ ಕೊಳಗೇರಿ ಉಪ ವಿಭಾಗದ ಎಇಇ ತಿಮ್ಮಣ್ಣಇವರ ಜೊತೆಗೆ ಫೋನಿನಲ್ಲಿ ವಿಚಾರಿಸಿ ಕೇಳಿದಾಗ ಅವರಿಗೆ ಇಲ್ಲಾ ಸಾರ್ ಮಾಡಿ ಕೊಡುತ್ತೇನೆ ಎಂದು ಒಪ್ಪಿಕೊಂಡ ನಂತರ ಇದುವರೆಗೂ ಜಾಗದ ಹಕ್ಕು ಪತ್ರದ ಫಲಾನುಭವಿಗಳಿಗೆ ನೊಂದಣಿ ಇಲಾಖೆಗೆ ಹಾಗೂ ನಗರ ಸಭೆಯ ಫಾರಂ ನಂ.3 ಮಾಡಿಸಿ ಕೊಡಲಿಕ್ಕೆ ಕವರಿಂಗ್ ಲೆಟರ್ ಹಾಗೂ ಇನ್ನಿತರ ದಾಖಲೆಗಳನ್ನು ಒದಗಿಸಿ ಕೊಡಲಾರದೆ ಇದ್ದು ನಿರಂತರವಾಗಿ ಕಾಲಹರಣ ಮಾಡಿ ಫಲಾನುಭವಿಗಳಿಗೆ ವಿನಾಃ ಕಾರಣಗಳಿಂದ ಬಡ ಫಲಾನುಭವಿಗಳಿಗೆ ತೊಂದರೆಯನ್ನು ನೀಡುತ್ತಿದ್ದರಿಂದ ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸುಮಾರು ಸಲ ತಿಳಿಸಿದ್ದರು ಸಹ ಪ್ರಯೋಜನ ವಾಗಲಾರದೆ ಇದ್ದರಿಂದ ಕೊಳಗೇರಿ ಅಭಿವೃದ್ಧಿ ಉಪ-ವಿಭಾಗ ಎಇಇ ತಿಮ್ಮಣ್ಣ ಇವರನ್ನು ಅಧಿಕಾರ ದುರ್ಬಳಕೆ ಕಾಯ್ದೆ ಅಡಿಯಲ್ಲಿ ಅಮಾನತು ಮಾಡಿ ಫಲಾನುಭವಿಗಳಿಗೆ ನೋಂದಣಿ ಇಲಾಖೆಯಲ್ಲಿ ನೋಂದಾಣಿ ಮಾಡಿಸಿ ಹಾಗೂ ನಗರ ಸಭೆಯಲ್ಲಿ ಫಾರಂ ನಂ.3 ಮಾಡಿಸಲಿಕ್ಕೆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟು ನಿಟ್ಟಿನ ಶಿಸ್ತಿನ ಆದೇಶ ಮಾಡಿಸಿ ಬಡ ನಿರ್ಗತಿಕ ಫಲಾನುಭವಿಗಳಿಗೆ ಅನುಕೂಲ ಮಾಡಿ ಕೊಡಬೇಕೆಂದು ಕರ್ನಾಟಕ ದಲಿತ ರಕ್ಷಣಾ ವೇದಿಕೆ ಸಂಸ್ಥಾಪಕರು ಎಚ್. ವೆಂಕಟೇಶ್. ಸಮಿತಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಶಂಕರ್. ನಂದಿಹಳ್ಳಿ. ತಾಲೂಕ ಅಧ್ಯಕ್ಷರು ಸಿ. ರಮೇಶ್ ಸಮಿತಿಯ ಪ್ರಧಾನ ಕಾರ್ಯದರ್ಶಿ ವಿ. ನಾಗರಾಜ್ ಸಮಿತಿಯು ಒಕ್ಕೊರಲಿನ ಆಗ್ರಹ ಪಡಿಸುತ್ತದೆ.

## ಕಾಯಕಯೋಗಿ ಶ್ರೀ ಸೊನ್ನಲಗಿ ಸಿದ್ದರಾಮೇಶ್ವರ ಪ್ರಶಸ್ತಿ ಹಾಗೂ ಜ್ಞಾನಯೋಗಿ ಅಕ್ಕಮಹಾದೇವಿ ಪ್ರಶಸ್ತಿಗೆ ಆಯ್ಕೆ ಯಾದವರ ಪಟ್ಟಿ ಪ್ರಕಟ






**ಬೆಂಗಳೂರು :** ವಿಶ್ವ ಕನ್ನಡ ಕಲಾ ಸಂಸ್ಥೆ ಹಿರಿಯೂರು ಕೇಂದ್ರದ ವತಿಯಿಂದ ವಿಜಯನಗರ ಜಿಲ್ಲೆಯ ಹುಲಿಕೆರೆ ಆನಂದ್ ವಿಹಾರ ನರ್ಸರಿ ಪರಿಸರದಲ್ಲಿ ಅಗಸ್ಟ್ 17 ರಂದು ನಡೆಯಲಿರುವ 5 ನೇ. ರಾಜ್ಯ ಮಟ್ಟದ ವಿಶ್ವ ಕನ್ನಡ ಸಾಹಿತ್ಯ ಪರಿಸರ ಸಮ್ಮೇಳನದಲ್ಲಿ ಪ್ರಶಸ್ತಿ ಪಡೆಯುವವರ ಪಟ್ಟಿಯನ್ನು ಸಂಸ್ಥೆಯ ಪದಾಧಿಕಾರಿಗಳ ಸಮ್ಮುಖದಲ್ಲಿ ಬಿಡುಗಡೆ ಮಾಡಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಈ ರವೀಶ ರವರು ತಿಳಿಸಿದ್ದಾರೆ. ಕೆ ನಂಜಪ್ಪ ಬಸವನಗುಡಿ ಮೈಸೂರು , ಈ ಅರುಣ್ ಕುಮಾರ್ ಚಿತ್ರದುರ್ಗ , ಕೆಂಚಪ್ಪ ಹನೂರು, ಶಿವರುದ್ರಯ್ಯ ಭಾಲ್ಕಿ, , ಬಸವರಾಜ ಎನ್. ಗುಂಡು ಮುಣಗು, ನಂಜನಗೂಡು ಗಣೇಶ್, ಎಂ ವಸಂತ್ ಕುಮಾರ್, ಮೌನೇಶ್ ಜಿಕೆ, ಡಾ. ನವೀನ್ ಬಿ ಸಜ್ಜನ್, ಬಸವರಾಜ್ ವಾರಿ, ಸಂದೀಪ್ ಎಂಪಿ, ಬ್ಯಾಡಗಿ ನೂರು ವೀರಭದ್ರಪ್ಪ ಶಿವಶರಣ ಎಸ್, ಬಲವಂತ ಸಿದ್ದಪ್ಪ ಮೋರಟಗಿ, ಅಂಕಿತ ಜಿ, ರಾಘವೇಂದ್ರ ಪದ್ಮಶಾಲಿ, ಸಿದ್ದು ಸಾವಳ ಸಂಗ, ಕೆ ಗಿರಿಯಪ್ಪ, ಬಸವರಾಜ ಮಾದೇವಪ್ಪ ಆಚಾರ್, ಕೆ ಎನ್ ಶಿವರಾಜು, ರಾಜು ಪವಾರ್, ರವೀಶ, ಎ.ತಿಂದಪ್ಪ ಕೂಡ್ಲಿಗಿ, ವಿಶ್ವೇಶ್ವರ ನಿಂಗಪ್ಪ ಮೇಟಿ, ಡಾ. ಗಂಗಾಧರ ವರ್ಮ ಅತ್ರೆಯ, ಕೆ ಬಸವರಾಜಪ್ಪ, ಇವರಿಗೆ ಕಾಯಕಯೋಗಿ ಸೊನ್ನಲಿಗೆ ಸಿದ್ದರಾಮಯ್ಯ ಪ್ರಶಸ್ತಿಗೆ ಆಯ್ಕೆ ಯಾಗಿರುತ್ತಾರೆ. ಸುಕನ್ಯಾ ತ್ಯಾವಣಿಗೆ,ಪ್ರೇಮಲತಾ,ಪ್ರಮೀಳಾ ದೀಪಕ್, ಹರ್ಷಿಣಿ ಜಿ, ಶರಣಯ್ಯ ಎನ್ ಟಿ, ಕೆಜಿ ಹೊನ್ನಾದೇವಿ, ಕಲಾ ಮಂಜುನಾಥ, ಪುಷ್ಪವತಿ ಟಿಎಸ್, ವೇದಾವತಿ ಸೋಮಸುಂದರ, ಎಂ ಎಂ ಜೆ ಕಾವ್ಯ ಜಿತೇಂದ್ರ ಕುಮಾರ್, ವಸಂತ ಕುಮಾರಿ ಆರ್ ಇವರಿಗೆ ಶರಣೇ ಅಕ್ಕಮಹಾದೇವಿ ಪ್ರಶಸ್ತಿ ಆಯ್ಕೆಯಾಗಿರುತ್ತಾರೆಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಈ ರವೀಶ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ.ಎಸ್.ವೀರೇಶ್. ಕಾನಾ.ಹೊಸಹಳ್ಳಿ**

## ಸ್ವರ್ಣಸಿರಿ ಪ್ರಶಸ್ತಿಗೆ ಹುನಗುಂದದ ಡಾ. ಮುರ್ತುಜಾ ಒಂಟಿ ಭಾಜನ



**ಹುನಗುಂದ :** ಹುಬ್ಬಳ್ಳಿಯ ಭಾವ ಸಂಗಮ ಪ್ರತಿಷ್ಠಾನ ದಿಂದ ಕೊಡ ಮಾಡುವ ರಾಜ್ಯ ಮಟ್ಟದ ಸ್ವರ್ಣಸಿರಿ ಪ್ರಶಸ್ತಿಗೆ ಹುನಗುಂದದ ಪ್ರಾಧ್ಯಾಪಕ ಡಾ. ಮುರ್ತುಜಾ ಬ ಒಂಟಿ ಅವರು ಭಾಜನರಾಗಿದ್ದಾರೆ.

ಜೂ.23 ರಂದು ಹುಬ್ಬಳ್ಳಿಯ ಮಹಾರಾಷ್ಟ್ರ ಮಂಡಳ ಸಭಾಂಗಣದಲ್ಲಿ ನಡೆಯುವ ಭಾವಸಂಗಮ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಅವರ ಸಾಹಿತ್ಯ ಸೇವೆಯನ್ನು ಪರಿಗಣಿಸಿ ರಾಜ್ಯ ಮಟ್ಟದ ಸ್ವರ್ಣಸಿರಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಅಧ್ಯಕ್ಷ ರಾಜೇಂದ್ರ ಪಾಟೀಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುನಗುಂದದ ಪಟ್ಟಣದ ಪ್ರಾಧ್ಯಾಪಕ ಡಾ.ಮುರ್ತುಜಾ ಒಂಟಿ ಅವರು ವೃತ್ತಿಯಿಂದ ಕನ್ನಡ ಅಧ್ಯಾಪಕರು,ಓರ್ವ ಲೇಖಕರಾಗಿ 8 ಸ್ವತಂತ್ರ ಕೃತಿಗಳನ್ನು 15 ಕ್ಕೂ ಹೆಚ್ಚು ಸಂಪಾದಿತ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅವರ ಸಾಹಿತ್ಯ ಸೇವೆಯನ್ನು ಗುರುತಿಸಿ ಈಗಾಗಲೇ 10 ಕ್ಕೂ ಹೆಚ್ಚು ಪ್ರಶಸ್ತಿಗಳು,ಗೌರವ ಪುರಸ್ಕಾರಗಳು ಲಭಿಸಿವೆ. ಅವರಿಗೆ ಸ್ವರ್ಣಸಿರಿ ಪ್ರಶಸ್ತಿ ಲಭಿಸಿರುವುದು ಅಭಿಮಾನದ ವಿಷಯ ಅದಕ್ಕಾಗಿ ಅವರ ಸ್ನೇಹಿತರು, ಹಿತೈಸಿಗಳು, ಅಪಾರ ವಿದ್ಯಾರ್ಥಿ ಬಳಗ ಹಾಗೂ ಕುಟುಂಬದ ಸದಸ್ಯರು ಅವರನ್ನು ಅಭಿನಂದಿಸಿದ್ದಾರೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮಲ್ಲಿಕಾರ್ಜುನ.ಎಂ. ಬಂಡರಗಲ್ಲ ಹುನಗುಂದ**

## ಬಳಗಾನೂರ ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆಯಲ್ಲಿ ವಿಶ್ವ ಯೋಗಾಸನ ದಿನ ಆಚರಣೆ



**ಬಳಗಾನೂರ :** ರಾಯಚೂರ ಜಿಲ್ಲೆಯ ಸಿಂಧನೂರು ತಾಲೂಕಿನ ಬಳಗಾನೂರಿನ ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢ ಶಾಲೆಯಲ್ಲಿ 10ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ-ಯ ಆಚರಿಸಲಾಯಿತು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಶಾಲೆಯ ಮುಖ್ಯ ಗುರುಗಳಾದ ಅಮರನಾಥ್ ಹಳ್ಳೂರ ಶಾಲಾ ಮಕ್ಕಳಿಗೆ ಯೋಗ ಮಾಡಿ ನೀರೋಗಿ ಯಾಗಿ ಜೀವನದಲ್ಲಿ ಪ್ರತಿಯೊಬ್ಬರೂ ಯೋಗ ಮಾಡುವುದನ್ನು ಕಡ್ಡಾಯ ಮಾಡಿಕೊಂಡು ಯೋಗ ಪಟುಗಳಾಗಿ ನಿಮ್ಮ ನಿತ್ಯ ಜೀವನದ ಶೈಲಿ ಬದಲಾವಣೆ ಮಾಡಿ ಕೊಂಡು ಆರೋಗ್ಯ ಭಾಗ್ಯ ದೊಂದಿಗೆ ಜೀವನ ನಿರ್ವಹಿಸ ಬೇಕೆ-ಂದು ವಿದ್ಯಾರ್ಥಿ ವಿಧ್ಯಾರ್ಥಿನಿಯರಿಗೆ ಕರೆ ನೀಡಿದರು ಈ ಸಂದರ್ಭದಲ್ಲಿ ಶಾಲೆಯ ಎಲ್ಲಾ ವಿದ್ಯಾರ್ಥಿ,ವಿಧ್ಯಾರ್ಥಿನಿಯರು, ಮುಖ್ಯಗುರುಗಳಾದ ಅಮರನಾಥ ಹಳ್ಳೂರ್, ಶಿಕ್ಷಕರು,ಸಿಬ್ಬಂದಿ ವರ್ಗದವರು ಸೇರಿದಂತೆ ಅನೇಕ ಯೋಗ ಆಸಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ವರದಿ : ನಾಗರತ್ನ ಹಳ್ಳೂರ**

## ನೀಟ ಮತ್ತು ಯುಜಿಸಿ ನೆಟ್ ಪರೀಕ್ಷೆಯ ಆಕ್ರಮ ತನಿಖೆ ನಡೆಸಿ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಲು "ಎಸ್,ಐ,ಓ" ಆಗ್ರಹ



**ಇಳಕಲ :** ನೀಟ್ (NEET) ಮತ್ತು ಯು.ಜಿ.ಸಿ ನೆಟ್ (UGC-NET) ಪರೀಕ್ಷೆಯಲ್ಲಿ ಆದ ಅಕ್ರಮವನ್ನು ತನಿಖೆಗೆ ಒಳಪಡಿಸಿ,ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಲು ಮತ್ತು ಎನ್.ಟಿ.ಎ (NTA) ನಡೆಸುವ ಕೇಂದ್ರಿಕೃತ ನೀಟ್ ಪರೀಕ್ಷೆಯನ್ನು ರದ್ದುಪಡಿಸಿ,

ನೀಟ್ ಪರೀಕ್ಷೆ ನಡೆಸಲು ಆಯಾ ರಾಜ್ಯಗಳಿಗೆ ಸ್ವಾಯತ್ತತೆ ನೀಡಬೇಕೆಂದು ಆಗ್ರಹಿಸಿ ಎಸ್.ಐ.ಓ(SIO) ಇಳಕಲ್ಲ ಘಟಕದ ವತಿಯಿಂದ ನಗರದ ಕಂಠಿ ವೃತ್ತದಲ್ಲಿ ಶುಕ್ರವಾರ ಪ್ರತಿಭಟನೆಯ ಹಮ್ಮಿಕೊಳ್ಳಲಾಗಿತ್ತು ಪ್ರತಿಭಟನೆ ನಡೆಸಿದ ಸಂಘಟನೆ ಮುಖಂಡರು & ಸದಸ್ಯರು ಸರ್ಕಾರಕ್ಕೆ ಪತ್ರವನ್ನು ಬರೆದು ತಹಸಿಲ್ದಾರ್ ಇಳಕಲ್ಲ ಇವರ ಮೂಲಕ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಎಸ್.ಐ.ಓ ಕರ್ನಾಟಕದ ರಾಜ್ಯ ಕಾರ್ಯದರ್ಶಿ ಮಹಮ್ಮದ್ ಪೀರ್ ಲಟಗೇರಿ, ಪ್ರಾಧ್ಯಾಪಕರಾದ ವಸಂತಕುಮಾರ್ ಕಡ್ಲಿಮಟ್ಟಿ ಮತ್ತು ಎಸ್.ಐ.ಓ(SIO) ಇಳಕಲ್ಲ ಘಟಕದ ಅಧ್ಯಕ್ಷರಾದ ಆಸಿಫ್ ಹುಣಚಗಿ ಹಾಗೂ ಸಾಲಿಡಾರಿಟಿ ಯೂಥ್ ಮೂವ್ಮೆಂಟ್ ನಗರದ ಅಧ್ಯಕ್ಷರಾದ ಹಬೀಬ್ ತಾವರಗೇರಾ,ಗಪಾರ ತಹಸೀಲ್ದಾರ್ ರವರು ಮಾತನಾಡಿದರು ಹಾಗೂ ನಗರದ ವಿವಿಧ

ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಪೋಷಕರು ಹಾಗೂ ಅಧ್ಯಾಪಕರು ಮತ್ತು ವಿದ್ಯಾರ್ಥಿ-ಯುವ ಮುಖಂಡರು ಕಾರ್ಯಕರ್ತರು ನೂರಾರು ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಶಿಸ್ತು, ತಾಳ್ಮೆ ಮೈಗೂಡಿಸಿಕೊಳ್ಳಲು ಯೋಗ ಸಹಕಾರಿ: ಡಾ. ಎ. ಕರಿಬಸಪ್ಪ




**ವಿಜಯನಗರ ಜಿಲ್ಲೆ ಕೂಡ್ಲಿಗಿ :** ತಾಲೂಕಿನ ಹೊಸಹಳ್ಳಿ ಹೋಬಳಿಯ ಗಡಿಗ್ರಾಮ ಕೆಂಚಮಲ್ಲನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಯೋಗ ಶಿಬಿರ ಆಯೋಜಿಸಲಾಗಿತ್ತು.

ಡಾ. ಎ. ಕರಿಬಸಪ್ಪ ಮಾತನಾಡಿ ಪ್ರತಿದಿನ ಯೋಗ ಮಾಡುವುದನ್ನು ಅಭ್ಯಾಸ ಮಾಡಿದಲ್ಲಿ ಜ್ಞಾನವನ್ನು ವೃದ್ಧಿಸಿಕೊಳ್ಳುವ ಜೊತೆಗೆ ಶಿಸ್ತು ಸಂಯಮ ಹಾಗೂ ತಾಳ್ಮೆಯನ್ನು ಮೈಗೂಡಿಸಿಕೊಂಡು ದೇಹದ ಅಂಗಾಂಗಗಳನ್ನು ಸುಸ್ಥಿತಿಯಲ್ಲಿಟ್ಟು ಕೊಳ್ಳಬಹುದು ಎಂದು ತಿಳಿಸಿದರು.

ಪ್ರತಿಯೊಬ್ಬರು ನಿತ್ಯ ಕನಿಷ್ಠ ಒಂದು ಗಂಟೆ ಯೋಗಾಭ್ಯಾಸ ಮಾಡುವುದರಿಂದ ಮಾನಸಿಕ ಒತ್ತಡ ಕಡಿಮೆಯಾಗಿ ಆರೋಗ್ಯವಂತ ಜೀವನ ನಡೆಸಬಹುದು.ಮನುಷ್ಯನ ಆರೋಗ್ಯ ಕಾಪಾಡುವಲ್ಲಿ ಪ್ರಮುಖ

ಪಾತ್ರ ವಹಿಸುವ ಯೋಗಾಭ್ಯಾಸವನ್ನು ಕೇವಲ ಒಂದು ದಿನಕ್ಕೆ ಸೀಮಿತಗೊಳಿಸದೆ ಪ್ರತಿನಿತ್ಯ ಕನಿಷ್ಠ ಒಂದು ಗಂಟೆ

ಅಭ್ಯಾಸ ಮಾಡುವುದನ್ನು ರೂಢಿ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಯೋಗ ದಿನಾಚರಣೆ ಯಲ್ಲಿ ಶಾಲೆಯ ಶಿಕ್ಷಕರಾದ ತಿಪ್ಪೇಸ್ವಾಮಿ , ಚೆನ್ನಬಸವಣ್ಣ , ಹರ್ಷ ವರ್ಧನ ,ರವಿಕುಮಾರ , ಡಾ.ಎ.ಕರಿಬಸಪ್ಪ ,ರಂಗನಾಯ್ಕ, ಹನುಮಂತ ಕುಮಾರ್,.ಗ್ರಾಮದ ಯುವ ಮುಖಂಡರಾದ ಕೆ. ಜಿ. ಬಸವರಾಜ, ಸೇರಿ ಅನೇಕರು ಯೋಗ ದಿನಾಚರಣೆಯ ಉಪಸ್ಥಿತರಿದ್ದರು.

## ನಾವದಗಿ ಗ್ರಾಮಕ್ಕೆ ಲೋಕಾಯುಕ್ತ ಅಧಿಕಾರಿಗಳ ಭೇಟಿ



**ತಾಳಿಕೋಟಿ :** ತಾಲೂಕಿನ ನಾವದಗಿ ಹಾಗೂ ಕೆಲವು ಗ್ರಾಮಗಳಲ್ಲಿ ಕಳೆದ ಒಂದು ವಾರದ ಹಿಂದೆ ಕಲುಷಿತ ನೀರು ಸೇವನೆಯಿಂದಾಗಿ ಉಂಟಾದ ಆರೋಗ್ಯ ಸಮಸ್ಯೆ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ನಾವದಗಿ ಗ್ರಾಮಕ್ಕೆ ಗುರುವಾರ ಬೇಟಿ ನೀಡಿದರು.

ಈ ಸಂದರ್ಭದಲ್ಲಿ ಲೋಕಾಯುಕ್ತ ಡಿ ವೈ ಎಸ್ ಪಿ ರೆಡ್ಡಿಯವರು ನಾವದಗಿ ಗ್ರಾಮದಲ್ಲಿರುವ ಕುಡಿಯುವ ನೀರಿನ ಮೂಲಗಳಾದ ತೆರೆದ ಬಾವಿ ಮತ್ತು ಬೋರ್ವೆಲ್ ನೀರಿನ ಸ್ಥಳಗಳನ್ನು ಪರಿಶೀಲಿಸಿದರು ನೀರಿನ ಶುದ್ಧತೆ ಕುರಿತು ಪಿಡಿಒ ಅನಿಲ್ ಕುಮಾರ್ ಕಿರಣಗಿ ಇವರಿಂದ ವಿವರವಾದ ಮಾಹಿತಿ ಪಡೆದುಕೊಂಡರು. ಶುದ್ಧ ನೀರು ಪೂರೈಸಲು ಗ್ರಾಮ ಪಂಚಾಯತಿಯಿಂದ ತೆಗೆದುಕೊಳ್ಳುವ ಕ್ರಮಗಳ ಕುರಿತು ವಿವರ ಕೇಳಿ ತಿಳಿದುಕೊಂಡರು. ಗ್ರಾಮದಲ್ಲಿರುವ ಆರ್ ಓ ಪ್ಲಾಂಟ್ ಸ್ಥಗಿತಗೊಂಡಿದ್ದು ಅದನ್ನು ಆದಷ್ಟು ಬೇಗ ಪ್ರಾರಂಭಿಸಲು ಸೂಚನೆ ನೀಡಿದರು. ನಂತರ ಅವರು ಗ್ರಾಮದಲ್ಲಿ ತಾತ್ಕಾಲಿಕವಾಗಿ ಆರಂಭಿಸಿದ ಓಪಿಡಿಗೆ ಭೇಟಿ ನೀಡಿ ತಾಲೂಕ ವೈದ್ಯಾಧಿಕಾರಿ ಸತೀಶ ತಿವಾರಿ ಅವರಿಂದ ಕಲುಷಿತ ನೀರು ಸೇವಿಸಿ ಅಸ್ಥವ್ಯಸ್ತಗೊಂಡ ರೋಗಿಗಳ ಮಾಹಿತಿ ಹಾಗೂ ಮುಂಜಾಗ್ರತ ಕ್ರಮಗಳ ಕುರಿತು ವಿವರುಗಳನ್ನು ಪಡೆದುಕೊಂಡರು. ಸ್ಥಳದಲ್ಲಿದ್ದ ಕೊಡಗನೂರು ಪಿಡಿಒ ಅವರಿಗೆ ಯಾವ ಕಾರಣಕ್ಕೂ ಅಜಾಗ್ರತೆ ಆಗದಂತೆ ನೋಡಿಕೊಳ್ಳಿ ಎಂದು ಸೂಚನೆ ನೀಡಿದರು. ಈ ಸಮಯದಲ್ಲಿ ಲೋಕಾಯುಕ್ತ ಸಿಪಿಐ.ತಾಪಂ ಇಒ ಬಿ.ಆರ್.ಬಿರಾದಾರ. ತಾಲೂಕಾ ಆರೋಗ್ಯಾಧಿಕಾರಿ ಸತೀಶ ತಿವಾರಿ. ಕೊಡಗಾನೂರ ಗ್ರಾಪಂ ಕಾರ್ಯದರ್ಶಿ ಚೌಧರಿ. ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಮತ್ತಿತರರು ಉಪಸ್ಥಿತರಿದ್ದರು.

## ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಗೊಳಸಂಗಿ ಗ್ರಾಮ ಘಟಕ ಉದ್ಘಾಟನೆ



**ನಿಡಗುಂದಿ :** ಸಮೀಪದ ಗೊಳಸಂಗಿ ಗ್ರಾಮದಲ್ಲಿ ಕರ್ನಾಟಕ ರಾಜ ರೈತ ಸಂಘ ಹಾಗೂ ಹಸಿರು ಸೇನೆ ನಿಡಗುಂದಿ ತಾಲೂಕ ಗೊಳಸಂಗಿ ಗ್ರಾಮ ಘಟಕ ಉದ್ಘಾಟನಾ ಕಾರ್ಯಕ್ರಮ ಜರುಗಿ-ತು ಈ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಪೂಜ್ಯರಾದ ಹುಚ್ಚಯ್ಯ ಸ್ವಾಮಿ ದೇವಾಂಗ ಮಠ ವಹಿಸಿದ್ದರು ಅತಿಥಿಗಳಾಗಿ ತಾಜ್ಮುಲ್ಲಾ ಖಾದ್ರಿ ಜಾಗೀರದಾರ ಅಂಜುಮನ್ ಇಸ್ಲಾಂ ಕಮಿಟಿ ಅಧ್ಯಕ್ಷರು,ಮತ್ತು ಜಿಲ್ಲಾಧ್ಯಕ್ಷರಾದ ಸಂಗಮೇಶ್ ಸಗರ್ ,ನಿಡುಗುಂದಿ ತಾಲೂಕ ಅಧ್ಯಕ್ಷರಾದ ಡಾ.ಕೆ ಎಂ ಗುಡ್ನಾಳ . ರಾಮನಗೌಡ ಪಾಟೀಲ್ ಬಿಜಾಪುರ್ ಜಿಲ್ಲಾ ಸಂಚಾಲಕರು, ಎ ಎಮ್ ಲಸ್ಕರಿ ನಿಡುಗುಂದಿ ಭಾಗವಹಿಸಿದ್ದರು

ಈ ಸಂದರ್ಭದಲ್ಲಿ ತಾಲೂಕ ಗೌರವ ಅಧ್ಯಕ್ಷರು, ಡಾಕ್ಟರ್ಐಆರ್ ಪಾಟೀಲ್ ಮನೋಹರ್ ನಿಡಗುಂದಿ ನಗರ ಘಟಕದ ಗೌರವಾಧ್ಯಕ್ಷರು, ನೂರ್ ಅಹಮದ್ ಹೆರಕಲ್ ನಿಡಗುಂದಿ ತಾಲೂಕ ಉಪಾಧ್ಯಕ್ಷರು ಶಬೀನಾ ಮುಲ್ಲಾ ನಿಡಗುಂದಿ ತಾಲೂಕ ಮಹಿಳಾ ಘಟಕದ ಅಧ್ಯಕ್ಷರು, ಸಲೀಮಾ ಅಬ್ದುಲ್ ರೆಹಮಾನ್ ಚಪ್ಪರ್ ಬಂದ್ ನಿಡಗುಂದಿ ತಾಲೂಕ ಮಹಿಳಾ ಘಟಕದ ಉಪಾಧ್ಯಕ್ಷರು, ನೀಲಮ್ಮ ಗುಂಡಿನ ಮನೆ , ಧಾನಮ್ಮ ವಾಲಿಕರ್ ,ಮತ್ತು ಪಿಕೆಪಿಎಸ್ ಬ್ಯಾಂಕಿನ ಅಧ್ಯಕ್ಷರಾದ ಮಹಿಬೂಬ್ ಹತ್ತರಕಿಹಾಳ

ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಕೇಶವ ಪವಾರ್ ನಾನಾಸಾಬ ಕಿರಗತ ಸಂಗಪ್ಪ ಕೋಲಾರ್ ಯುವ ಮುಖಂಡರಾದ ಇಮ್ತಿಯಾಜ ಹೆಬ್ಬಾಳ ಗ್ರಾಮ ಘಟಕದ ಅಧ್ಯಕ್ಷರಾದ ಇಬ್ರಾಹಿಂ ಕಮತಗಿ ಗೌರವಾಧ್ಯಕ್ಷರು ಶಕೀಲ ಅಮದ ಸಾಹೇಬ ಜಾಗೀರದಾರ. ಉಪಾಧ್ಯಕ್ಷರು ಮಕ್ಬುಲ್ ನಾಗರಾಳ ಉಪಾಧ್ಯಕ್ಷರು ಸಂತೋಷ್ ಪ್ರಧಾನ ಕಾರ್ಯದರ್ಶಿ ಭಾಷಾ ನಾಗರಾಳ ಬಂದೇನಮಾಜ ದಳವಾಯಿ ಖಜಾಂಚಿ ನಾತು ಬಾ ಸುನಿಲ್ ಲಾಲಸಾಬ ಸುರೇಶ ಮೌಲಾಲಿ ಡೊಂಗ್ರಿ ಸಾಬ್ ಈಶ್ವರ ಕಾಸು ಜಾವಿದ್ ಕೃಷ್ಣ ಬಂದೇನಮಾಜ ಪರಶುರಾಮ ಸಾಹೇಬಲಾಲ ಹುಸೇನಬಾಷಾ ಸುನಿಲ್, ಇಬ್ರಾಹಿಂ ಸಾಬ್ ಬಳಬಟ್ಟಿ ನಿಡಗುಂದಿ ಸದಸ್ಯರು, ಮೌಲಾಸಾಬ್ ಕಂದಗಲ್ ಬಳಬಟ್ಟಿ ಗ್ರಾಮ ಘಟಕದ ಕಾರ್ಯದರ್ಶಿಗಳು, ಚಾಂದ್ ಸಾಬ್ ನದಾಫ್ ಮಸೂತಿ ಗ್ರಾಮ ಘಟಕದ ಅಧ್ಯಕ್ಷರು. ಕರಿಯಪ್ಪ ಆಲೂರು ಮಸೂತಿ ಗ್ರಾಮ ಘಟಕದ ಉಪಾಧ್ಯಕ್ಷರು, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು

**ವರದಿ : ತೌಸೀಫ ಗಣಿ**

# ಅರಿಹಂತ ಆಸ್ಪತ್ರೆಯ ವೈದ್ಯರ ಸಂದರ್ಶನ
# ಕಿಡ್ನಿಗಳು ಸದಾ ಆರೋಗ್ಯವಾಗಿರಬೇಕು




**ಬೆಳಗಾವಿ :** ನಮ್ಮ ದೇಹದ ಆರೋಗ್ಯ ಕಾಪಾಡುವಲ್ಲಿ ಕಿಡ್ನಿ ಪಾತ್ರ ಪ್ರಮುಖವಾಗಿರುತ್ತದೆ ಮೂತ್ರಪಿಂಡಗಳ ಕಾರ್ಯನಿರ್ವಹಣೆಗೆ ದಿನನಿತ್ಯ ಸೇವಿಸುವ ಆಹಾರಗಳು ಕ್ರಮಬದ್ಧವಾಗಿರಬೇಕು ಆಗ ಮಾತ್ರ ನಮ್ಮ ದೇಹದಲ್ಲಿ ಕಂಡುಬರುವ ವಿಷಕಾರಿ ಅಂಶಗಳನ್ನು ಮೂತ್ರವಿಸರ್ಜನೆ ಮೂಲಕ ಹೊರಹಾಕುವ ಕೆಲಸ ಕಿಡ್ನಿ ನೇರವೇರಿಸುತ್ತದೆ ಎಂದು ಅರಿಹಂತ ಆಸ್ಪತ್ರೆಯ ತಜ್ಞ ವೈದ್ಯರಾದ ಡಾ ವಿಜಯಕುಮಾರ ಪಾಟೀಲ ಅಭಿಪ್ರಾಯಪಟ್ಟರು.

ಮಹಿಳಾ ಕಲ್ಯಾಣ ಸಂಸ್ಥೆಯ "ನಮ್ಮೂರ ಬಾನುಲಿ" ಸಮುದಾಯ ರೇಡಿಯೋ ಕೇಂದ್ರದಲ್ಲಿ ಬೆಳಗಾವಿ ನಗರದ ಅರಿಹಂತ ಆಸ್ಪತ್ರೆಯ ವಿವಿಧ ವಿಭಾಗಗಳ ತಜ್ಞ ವೈದ್ಯರ ವಿಶೇಷ ಸಂದರ್ಶನದಲ್ಲಿ ಮಾತನಾಡುತ್ತಾ ಮಾನವನ ಜೀವನದಲ್ಲಿ ಆರೋಗ್ಯ ಎಂಬುದು ಬಹಳ ಮುಖ್ಯವಾದ ಅಂಶ ಅದನ್ನು ಕಾಪಾಡಿಕೊಂಡು ಸದೃಢ ಆರೋಗ್ಯ ಹೊಂದಬೇಕೆಂದರು. ಇದಲ್ಲದೇ ಮೂತ್ರಪಿಂಡ ವೈಫಲ್ಯದ ಕಾರಣಗಳು, ಅದರಿಂದಾಗುವ ಪರಿಣಾಮಗಳು ಹಾಗೂ ಅದಕ್ಕೆ ಪರಿಹಾರೋಪಾಯಗಳ ಬಗ್ಗೆ ಮಾಹಿತಿ ನೀಡಿ–ದರು. ನರ ವೈದ್ಯರುಗಳಾದ ಡಾ ಸಂಜೀವ ರಾಥೋಡ ಹಾಗೂ ಡಾ ಸೂರಜ ಪಾಟೀಲ ಇವರು ಮಾತನಾಡಿ ಸ್ಟ್ರೋಕ್ ನಿರ್ವಹಣೆಯ ಬಗ್ಗೆ ಸಂದರ್ಶನ ನೀಡಿದರು. ಈ ಸಂದರ್ಭದಲ್ಲಿ ನಮ್ಮೂರ ಬಾನುಲಿಯ ಆರ್ ಜೆ ಗಳಾದ ಚೇತನ ಹಾಗೂ ಶ್ವೇತಾ ಸಂದರ್ಶಿಸಿದರು.

## 25ನೇ ದಿನ ಧರಣಿ 3ನೇ ದಿನ ಸರದಿ ಉಪವಾಸ ಸತ್ಯಾಗ್ರಹ ಪೂರೈಸಿದ ನ್ಯಾಯಯುತ ಅಂಬೇಡ್ಕರ ಭವನ ಹೋರಾಟ
# ರಾಜ್ಯ ಸರ್ಕಾರದಿಂದ ದಲಿತ ಜನಾಂಗಕ್ಕೆ ಘೋರ ಅನ್ಯಾಯ: ಮಹೇಶ ಚಲವಾದಿ

**ವಿಜಯಪುರ :** ವಿಜಯಪುರ ನಗರದ ಮನಗೂಳಿ ಅಗಸಿ ಬಡಾವಣೆಯ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಡಾ ಬಿ ಆರ್ ಅಂಬೇಡ್ಕರ್ ಯುವಕ ಸಂಘದಿಂದ ಹಮ್ಮಿಕೊಂಡಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಶುಕ್ರವಾರ25ನೇ ದಿನಹಾಗೂ 3ನೇ ದಿನ ಸರದಿ ಉಪವಾಸ ಸತ್ಯಾಗ್ರಹ ಪೂರೈಸಿದೆ. ಇಂದು ಹೋರಾಟಗಾರರಾದ ರೋಹಿತ ಮಲಕಣ್ಣನವರ ಹಾಗೂ ಮಂಜುನಾಥ ಶಿವಶರಣ ಅವರು ಸರದಿ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ.




ಈ ಸಂದರ್ಭದಲ್ಲಿ ಮುಖಂಡ ಮಹೇಶ ಚಲವಾದಿ ಮಾತನಾಡಿ,ಕಳೆದ 25 ದಿನಗಳಿಂದ ಅಹೋರಾತ್ರಿ ಧರಣಿ ಸತ್ಯಾಗ್ರಹ ಹಾಗೂ ಕಳೆದ 3 ದಿನಗಳಿಂದ ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರೂ ಕೂಡಾ, ರಾಜ್ಯ ಸರ್ಕಾರ ದಿವ್ಯ ನಿರ್ಲಕ್ಷ್ಯ ತೋರುವ ಮೂಲಕ ದಲಿತ ಜನಾಂಗಕ್ಕೆ ಘೋರಅನ್ಯಾಯವೆಸಗಿದೆಎಂದುಆಕ್ರೋಶ ವ್ಯಕ್ತಪಡಿಸಿದ ಅವರು, ಇಲ್ಲಿಯವರೆಗೆ ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ರಾಜ್ಯ ಸರ್ಕಾರದ ಯಾವೊಬ್ಬ ಪ್ರತಿನಿಧಿಯು ಕೂಡ ನಮ್ಮ ಸಮಸ್ಯೆಯನ್ನು ಆಲಿಸಲು ಬಾರದೆ ಇರುವುದು ಇವರ ದಲಿತ ವಿರೋಧಿ ನೀತಿಯನ್ನು ಎತ್ತಿ ತೋರಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ರಾಜು ಕಾಖಂಡಕಿ, ಶಿವರಾಜ ಸಾಣಕರ, ಬಸವಕುಮಾರ ಕಾಂಬಳೆ,ಸತೀಶ ಕುಬಕಡ್ಡಿ, ರವಿ ಕಾಖಂಡಕಿ,ಶಂಕರ ಚಲವಾದಿ, ಪ್ರತಾಪ ಚಿಕ್ಕಲಕಿ, ಕೀರ್ತಿ ಕಾಖಂಡಕಿ, ಬಸವರಾಜಕುಬಕಡ್ಡಿ, ಶಂಕರ ಕಾಖಂಡಕಿ, ಸಚೀನ ಕಾಖಂಡಕಿ, ಆಕಾಶ ಕಾಂಬಳೆ, ಆಕಾಶ ಕಾಖಂಡಕಿ, ಶೇಖು ಕೂಡಗಿ, ಕೃಷ್ಣಾ ಚಲವಾದಿ,ಸುಧಾ ಚಲವಾದಿ, ರಾಧಿಕಾ ಕುಬಕಡ್ಡಿ, ಆಶಾ ಮಾನೆ, ಗೀತಾ ವಾಲೀಕಾರ,ರುಕ್ಮಿಣಿ ಕಾಖಂಡಕಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ಶ್ರೀ ಭಗೀರಥ ವಧು-ವರರ ಮಾಹಿತಿ ಕೇಂದ್ರದ ನೂತನ ಪದಾಧಿಕಾರಿಗಳ ಆಯ್ಕೆ
# ವಧು-ವರರ ಮಾಹಿತಿ ಕೇಂದ್ರದಿಂದ ಸಂಬಂಧ ಬೆಸೆಯುವ ಕಾರ್ಯ

**ತಾಳಿಕೋಟೆ :** ವಧು-ವರರ ಮಾಹಿತಿ ಕೇಂದ್ರಗಳು ಹಣದಾಸೆಗೆ ಬೀಳದ ಸಂಬಂದಗಳನ್ನು ಬೆಸೆಯುವಂತಹ ಕಾರ್ಯ ಮಾಡುತ್ತಾ ಸಾಗಬೇಕು ಕಳೆದ 20 ವರ್ಷಗಳಿಂದಲೂ ಶ್ರೀ ಭಗೀರಥ ವಧು-ವರರ ಉಚಿತ ಮಾಹಿತಿ ಕೇಂದ್ರವು ಸಾವಿರಾರು ಸಂಬಂದಗಳನ್ನು ಬೆಸೆಯುವದರೊಂದಿಗೆ ಸಮಾಜಮುಖಿ ಕಾರ್ಯದಲ್ಲಿ ತೊಡಗಿರುವದು ಶ್ಲಾಘನೀಯವಾಗಿದೆ ಎಂದು ಶ್ರೀ ಬಸವೇಶ್ವರ ದೇವಸ್ಥಾನದ ಅರ್ಚಕ ವೇ. ತಿರುಪತಿ ಗ್ರಾಂಪೊರೊಹಿತ ಅವರು ನುಡಿದರು.



ಪಟ್ಟಣದ ಶ್ರೀ ಭಗೀರಥ ಸರ್ವಧರ್ಮ ವಧು-ವರರ ಮಾಹಿತಿ ಕೇಂದ್ರದ ನೂತನ ಪದಾಧಿಕಾರಿಗಳ ಆಯ್ಕೆ ಮತ್ತು ಉಚಿತ ವಧು-ವರರ ಮಾಹಿತಿ ಹಾಗೂ ಪಾಲಕರ ಸಭೆಯಲ್ಲಿ ದಿವ್ಯ ಸಾನಿದ್ಯ ವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ದಿ.ಸುಭಾಸ ಯರಕ್ಯಾಳ ಅವರಿಂದ ಪ್ರಾರಂಭಗೊಂಡ ಶ್ರೀ ಭಗೀರಥ ವಧು-ವರರ ಉಚಿತ ಮಾಹಿತಿ ಕೇಂದ್ರವು ಇಂದು ಉತ್ತರ ಕರ್ನಾಟಕ ಭಾಗದಲ್ಲಿಯೇ ಪ್ರಚಲಿತದಲ್ಲಿದೆ ಇದಕ್ಕೆ ಕಾರಣ ಯಾವುದೇ ಆಸೆ ಆಮಿಷಗಳಿಗೆ ಒಳಪಡದೇ ಸಂಬಂದಗಳನ್ನು ಬೆಸೆಯುವದರೊಂದಿಗೆ ಗಟ್ಟಿಗೊಳ್ಳಿಸುವಂತಹ ಕಾರ್ಯ ಮಾಡುತ್ತಾ ಬಂದಿರುವದೇ ಸಾಕ್ಷೀಯಾಗಿದೆ ಇಂದಿನ ಕಂಪ್ಯೂಟರ್ ಯುಗದಲ್ಲಿ ಎಲ್ಲ ವಸ್ತುಗಳು ಕುಳಿತಲ್ಲೇ ಸಿಕ್ಕರೂ ಕೂಡಾ ವಧು-ವರರನ್ನು ಮುಖಾ ಮುಖಿಮಾಡಿಯೇ ಸಂಬಂದಗಳನ್ನು ಬೆಸೆಯಬೇಕಾಗುತ್ತದೆ ಅಂತಹ ಕಾರ್ಯ ಪೊಷಕರನ್ನು ಮತ್ತು ವಧು-ವರರ ಒಂದೆಡೆ ಸೇರಿಸಿ ಪರಿಚಯಿಸುವದರೊಂದಿಗೆ ಸಂಬಂದಗಳನ್ನು ಬೆಸೆಯುವಂತಹ ಕಾರ್ಯ ಭಗೀರಥ ವಧು-ವರರ ಮಾಹಿತಿ ಕೇಂದ್ರದಿಂದ ಮಾತ್ರ ನಡೆಯುತ್ತಿರುವದು ಹೆಮ್ಮೆಯ ಸಂಗತಿಯಾಗಿದೆ ಎಂದರು. ಕೇವಲ ಒಂದೇ ಜಾತಿಗೆ ಸೀಮಿತಗೊಳಿಸದೇ ಎಲ್ಲ ಜಾತಿ ಧರ್ಮದವರಿಗೆ ಅನುಕೂಲವಾಗುವಂತಹ ಕೇಂದ್ರವನ್ನು ಈ ಭಾಗದಲ್ಲಿ ಕಟ್ಟಿ ಬೆಳೆಸಲಾಗಿದೆ ಈ ಕೇಂದ್ರದಿಂದ ಸಾವಿರಾರು ಜನರು ಕಂಕಣಭಾಗ್ಯವನ್ನು ಕಲ್ಪಿಸಿಕೊಂಡಿದ್ದಾರೆ ಅವರೆಲ್ಲರಿಗೂ ದೇವರು ಒಳ್ಳೆಯದನ್ನು ಮಾಡಿದ್ದಾನೆ ದಿ.ಸುಭಾಸ ಯರಕ್ಯಾಳ ಅವರು ಕಟ್ಟಿದ ಸಂಸ್ಥೆಯನ್ನು ಸುನೀಲಕುಮಾರ ಯರಕ್ಯಾಳ ಅವರ ನೇತೃತ್ವದಲ್ಲಿ ಪದಾಧಿಕಾರಿಗಳು ಮುಂದುವರೆಸಿಕೊಂಡು ಸಾಗಿರುವದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಇನ್ನೋರ್ವ ಅಥಿತಿಗಳಾಗಿ ಆಗಮಸಿದ ಸಿದ್ಧಯ್ಯ ಮುರೋಳ ಅವರು ಮಾತನಾಡಿ ಪುಸ್ತುತ ದಿನಗಳಲ್ಲಿ ಯಾವ ಯಾವ ಜಾತಿಯವರು ಎಷ್ಟು ಶಿಕ್ಷಣ ಕಲಿತವರು, ಸರ್ಕಾರಿ ನೌಕರರು, ಇಂಜಿನಿಯರ್ಸ್, ವ್ಯಾಪಾರಸ್ಥರು, ಮುಂತಾದವರು ನಮ್ಮ ಮನೆಯ ಪಕ್ಕದಲ್ಲಿ ಇದ್ದರೂ ಸಹ ಗೋತ್ತಾಗುವುದಿಲ್ಲ. ಅದ್ದರಿಂದ ಉಚಿತ ಪರಿಚಯ ಕಾರ್ಯಕ್ರಮವನ್ನು ಏರ್ಪಡಿಸುವ ಮೂಲಕ ವಧು-ವರರ ಮುಖಾ-ಮುಖಿ ಭೇಟಿಯಾಗಿ ಪಾಲಕರ, ಪೋಷಕರ ಸಮೂಹದಲ್ಲಿ ತಮ್ಮ ಇಚ್ಛೆ ವ್ಯಕ್ತಪಡಿಸುವ ಅವಕಾಶ ಕಲ್ಪಿಸುತ್ತಿರುವ ಶ್ರೀ ಭಗೀರಥ ಉಚಿತ ವಧು-ವರರ ಮಾಹಿತಿ ಕೇಂದ್ರದ ಕಾರ್ಯ ಶ್ಲಾಘನೀಯವೆಂದರು.

ನಂತರ ಶ್ರೀ ಭಗೀರಥ ವಧು-ವರರ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು. ಗೌವರ ಅಧ್ಯಕ್ಷರನ್ನಾಗಿ ಭೀಮಣ್ಣ ಕಟ್ಟಿಮನಿ, ಅಧ್ಯಕ್ಷರನ್ನಾಗಿ ಬಸಯ್ಯ ಹಿರೇಮಠ, ಉಪಧ್ಯಾಕ್ಷ ಶಿವಾಜಿ ಯಡ್ರಾಮಿ, ಕಾರ್ಯದರ್ಶಿ ಸುನೀಲ ಕುಮಾರ ಯರಕಾಳ, ಕಾನೂನು ಸಲಹೆಗಾರ ಸಿದ್ಧಣ ಬಸರಿಕಟ್ಟಿ, ಖಜಾಂಚಿ ಪೀರ ಅಹ್ಮದ ಖಾಜಿ, ಸಂಚಾಲಯಕ ವಿ.ಜಿ. ಗಣಾಚಾರಿ, ವ್ಯವಸ್ಥಾಪಕಿ ಶ್ರೀಮತಿ ಜೈತುನ ನದಾಫ್, ಸಲಹೆಗಾರ್ತಿ ಗೀತಾ ಬಾವಿಕಟ್ಟಿ, ಕಚೇರಿ ಸಹಾಯಕ ಪುಕಾಶ ಬಬಲೇಶ್ವರ ಅವರನ್ನು ಆಯ್ಕೆ ಮಾಡಲಾಯಿತು.

ಇದೇ ಸಮಯದಲ್ಲಿ ವಿವಿಧ ಜಿಲ್ಲೆಗಳಿಂದ ಆಗಮಿಸಿದ ವಧು-ವರರ ಹಾಗೂ ಪಾಲಕರು, ಪೋಷಕರು, ಕೇಂದ್ರದಿಂದ ಉಚಿತ ಮಾಹಿತಿ ಪಡೆದುಕೊಂಡರು. ಸುನೀಲಕುಮಾರ ಯರಕಾಳ ನಿರೂಪಿಸಿದರು. ಶಿವಾಜಿ ಯಡ್ರಾಮಿ ವಂದಿಸಿದರು.

# ಸರಕಾರಿ ಹಿರಿಯ ಬಾಲಕರ ಬಾಲಮಂದಿರದಲ್ಲಿ ಅಂರಾಷ್ಟ್ರೀಯ ಆಟದ ದಿನ ಆಚರಣೆ

**ಬೆಳಗಾವಿ :** ಅಂತರಾಷ್ಟ್ರೀಯ ಆಟದ ದಿನ ಆಚರಣೆ ಪ್ರಯುಕ್ತ ಬೆಳಗಾವಿಯ ಸರಕಾರಿ ಹಿರಿಯ ಬಾಲಕರ ಬಾಲ ಮಂದಿರದಲ್ಲಿ ಜೂ. 11 ರಂದು ಅಂತರಾಷ್ಟ್ರೀಯ ಆಟದ ದಿನ ಆಚರಿಸಲಾಯಿತು. ಸರಕಾರಿ ಹಿರಿಯ ಬಾಲಕರ ಬಾಲ ಮಂದಿರದ ಅಧೀಕ್ಷಕರಾದ ಎನ್.ಎಸ್.ನಾಗಲೋಟಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಆಟದ ಮಹತ್ವವನ್ನು ಸವಿವರವಾಗಿ ತಿಳಿಸಿಕೊಟ್ಟರು.



ಈ ಸಂದರ್ಭದಲ್ಲಿ ಸರಕಾರಿ ಹಿರಿಯ ಬಾಲಕರ ಬಾಲ ಮಂದಿರದ ಮಕ್ಕಳು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು. ತದನಂತರ ಮಕ್ಕಳಿಗೆ ಓಟ, ರೀಲೆ, ಲಗೋರಿ, ಚೇಸ್ ಹಾಗೂ ಕೇರಂ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

# ಬಾಲಕಾರ್ಮಿಕ ನಿರ್ಮೂಲನೆಗೆ ಜಾಗೃತಿ ಅಗತ್ಯ: ಜಿಲ್ಲಾಧಿಕಾರಿ ಟಿ.ಭೂಬಾಲನ್

**ವಿಜಯಪುರ :** ಬಾಲಕಾರ್ಮಿಕತೆ ಅನಿಷ್ಠ ಪದ್ಧತಿಯಾಗಿದ್ದು, ಇದರ ನಿರ್ಮೂಲನೆಗೆ ಪರಿಣಾಮಕಾರಿ ಜಾಗೃತಿ ಅಗತ್ಯವಾಗಿದ್ದು, ಎಲ್ಲಾ ಅಧಿಕಾರಿಗಳು, ಸಂಘ- ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಟಿ. ಭೂಬಾಲನ್ ಕರೆ ನೀಡಿದರು.



ಬುಧವಾರ ನಗರದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ ಮತ್ತು ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ ಇವರ ಸಹಯೋಗದಲ್ಲಿ ಹಮ್ಮಿಕೊಂಡ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬಾಲಕಾರ್ಮಿಕ ಪದ್ಧತಿ ನಿಷೇಧಿಸಲಾಗಿದೆ. ಇದೊಂದು ಅಪರಾಧವಾಗಿದೆ ಎಂಬುದರ ಕುರಿತು ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸಿ, ಸಂಪೂರ್ಣ ನಿರ್ಮೂಲನೆಗೆ ಕೈಜೋಡಿಸಬೇಕು. ಬಾಲಕಾರ್ಮಿಕ ಪ್ರಕರಣಗಳು ಕಂಡುಬಂದ ಸಂದರ್ಭದಲ್ಲಿ ಮಕ್ಕಳ ಸಹಾಯವಾಣಿ-1098ಕ್ಕೆ ಸಾರ್ವಜನಿಕರು ಕರೆ ಮಾಡಿ ಮಾಹಿತಿ ನೀಡಬಹುದಾಗಿದೆ. ಕಾರ್ಮಿಕ ಇಲಾಖೆಯು ಸೇರಿದಂತೆ ಅಧಿಕಾರಿಗಳು ದಾಳಿ ಮಾಡಿದ ಸಂದರ್ಭದಲ್ಲಿ ರಕ್ಷಿಸಿದ ಮಕ್ಕಳನ್ನು ಬಾಲಮಂದಿರಕ್ಕೆ ದಾಖಲಿಸಿ ಅವರ ಪುನರ್ವಸತಿ ಕಲ್ಪಿಸಿ ಅವರಿಗೆ ಪೂರಕವಾದ ಶಿಕ್ಷಣ, ಕೌಶಲಗಳ ತರಬೇತಿ ಒದಗಿಸಲಾಗುತ್ತಿದೆ ಎಂದು ಹೇಳಿದರು.

ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಶಾಲಾ ಮುಖ್ಯೋಪಾಧ್ಯಯರು, ಶಿಕ್ಷಕರ ಪಾತ್ರ ಬಹಳ ಪ್ರಮುಖವಾಗಿದೆ. ಶಾಲೆಯಿಂದ ಹೊರಗುಳಿದ ಮಕ್ಕಳ ಮಾಹಿತಿ ಕ್ರೋಢೀಕರಿಸಿಕೊಂಡು ಆ ಬಗ್ಗೆ ಸಂಬಂಧಿಸಿದವರಿಗೆ ಮಾಹಿತಿ ನೀಡಬೇಕು. ಬಾಲಕಾರ್ಮಿಕ ಕಾರ್ಮಿಕ ಅಧಿಕಾರಿಗಳು ಸೇರಿದಂತೆ ಇತರೆ ಇಲಾಖೆಯ ಅಧಿಕಾರಿಗಳು ಶಾಲಾ ಮುಖ್ಯಸ್ಥರೊಂದಿಗೆ ಸಮನ್ವಯ ಸಾಧಿಸಬೇಕು. ವಲಸೆ ಕಾರ್ಮಿಕ ಕುಟುಂಬಗಳ ಬಗ್ಗೆ ಮಾಹಿತಿ ಪಡೆದುಕೊಂಡು ಅವರ ಮಕ್ಕಳ ಶಿಕ್ಷಣ, ಮೂಲಭೂತ ಹಕ್ಕುಗಳ ಸಂರಕ್ಷಣೆ ಮಾಡಬೇಕು. ಮಕ್ಕಳ ಭವಿಷ್ಯ ಸುಂದರವಾಗಿಸಲು ಬಾಲಕಾರ್ಮಿಕತೆ ಪಿಡುಗನ್ನು ತೊಲಗಿಸಬೇಕು.

ಕಾರ್ಮಿಕ ನಿರೀಕ್ಷಕರಾದ ಜಗದೇವಿ ಸಜ್ಜನ ಬಾಲಕಾರ್ಮಿಕ ವಿರೋಧಿ ಪ್ರತಿಜ್ಞಾ ವಿಧಿ ಬೋಧಿಸಿದರು.

ಈ ಕಾರ್ಯಕ್ರಮದಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾದ ರಾಮನಗೌಡ ಹಟ್ಟಿ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘದ ಯೋಜನಾ ನಿರ್ದೇಶಕರಾದ ನೀಲಮ್ಮಾ ಖೇಡಗಿ, ಜಿಲ್ಲಾ ಕಾರ್ಮಿಕ ಇಲಾಖೆ ಅಧಿಕಾರಿ ಎಸ್.ಜಿ. ಕೈನೂರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದೀಪಾಕ್ಷಿ ಜಾನಕಿ, ಅನೌಪಚಾರಿಕ ಶಿಕ್ಷಣ ಸಂಸ್ಥೆಯ ನಿರ್ದೇಶಕ ಫಾದರ್ ಟಿಯೋಲ್ ಮಚಾದೋ, ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಎಸ್.ಜಿ. ಕುಲಕರ್ಣಿ ಉಪಸ್ಥಿತರಿದ್ದರು.

# ಡೋಣಿ ಪ್ರವಾಹ ನಿರ್ವಹಣೆಗೆ ಮುಂಜಾಗೃತ ಕ್ರಮ ಕೈಗೊಳ್ಳಿ: ಜಿಪಂ ಸಿಇಓ ರಿಷಿ ಆನಂದ

**ವಿಜಯಪುರ :** ಹೆಗಡಿಹಾಳ, ಸಾತಿಹಾಳ ಹಾಗೂ ಯಾಳವಾರ ಗ್ರಾಮಗಳಲ್ಲಿ ಡೋಣಿ ನದಿಯಿಂದ ಉಂಟಾಗುವ ಪ್ರವಾಹ ನಿರ್ವಹಣೆಗೆ ಅಗತ್ಯ ಕ್ರಮಕೈಗೊಳ್ಳುವಂತೆ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಅಧಿಕಾರಿಗಳಿಗೆ ಸೂಚಿಸಿದರು.



ಬುಧವಾರ ಜಿಲ್ಲೆಯ ಹೆಗಡಿಹಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಉಕುಮನಾಳ ಗ್ರಾಮದಲ್ಲಿ ಈ ಹಿಂದೆ ಪ್ರವಾಹ ಬಂದ ಹಿನ್ನೆಲೆಯಲ್ಲಿ ಲೋಕೋಪಯೋಗಿ ಹಾಗೂ ಗ್ರಾಮ ಪಂಚಾಯತಿವತಿಯಿಂದಪ್ರವಾಹವು ಸರಾಗವಾಗಿ ಸಾಗುವಂತೆ ಕೈಗೊಂಡ ಕಾಮಗಾರಿಗಳನ್ನು ಪರಿಶೀಲಿಸಿದರು.

ಈ ಬಾರೀ ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಅತೀವೃಷ್ಠಿಯಿಂದ ಪ್ರವಾಹ ಬರುವ ಸಂಭವವಿದ್ದು, ಪ್ರವಾಹ ನಿಯಂತ್ರಣದ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗ್ರಾಮಸ್ಥರಿಗೆ ಶುದ್ಧ ಕುಡಿಯುವ ನೀರು ಪೂರೈಸುವ ಕುಡಿಯುವ ನೀರಿನ ಟ್ಯಾಂಕ್ ಸ್ವಚ್ಛಗೊಳಿಸುವುದು, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಕಾರ್ಯಾತ್ಮಕ ಸ್ಥಿತಿಯಲ್ಲಿಡಬೇಕು ಹಾಗೂ ಗ್ರಾಮದಲ್ಲಿನ ಚರಂಡಿಗಳನ್ನು ಸ್ವಚ್ಛಗೊಳಿಸಬೇಕು. ಸಾರ್ವಜನಿಕರಿಗೆ ಕುಡಿಯಲು ಯೋಗ್ಯವಾದ ನೀರನ್ನು ಕ್ಲೋರೀಕರಣ-ಗೊಳಿಸಿ ಪೂರೈಸಲು ಕ್ರಮ ಕೈಗೊಳ್ಳಬೇಕು ಎಂದು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಳಿಕ ದೇವರ ಹಿಪ್ಪರಗಿ ತಾಲೂಕಿನ ಸಾತಿಹಾಳ ಗ್ರಾಮದ ಡೋಣಿ ನದಿಯ ಸೇತುವೆ, ಗ್ರಾಮದಲ್ಲಿನ ಚರಂಡಿಗಳು, ನೀರಿನ ಟ್ಯಾಂಕ್, ಗ್ರಾಮದ ರಸ್ತೆಗಳು ಮತ್ತು ಯಾಳವಾರ ಗ್ರಾಮದ ಡೋಣಿ ನದಿ ಸೇತುವೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಳೆಯಿಂದಾಗಿ ಡೋಣಿ ನದಿ ತುಂಬಿ ಹರಿಯುತ್ತಿದ್ದು, ನೀರು ಸರಾಗವಾಗಿ ಸಾಗಲು ಕ್ರಮ ಕೈಗೊಳ್ಳಬೇಕು ಎಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸೂಚಿಸಿದರು.

ಡೋಣಿ ನದಿ ನದಿ ದಂಡೆಯಲ್ಲಿರುವ ಎಲ್ಲ ಸಾರ್ವಜನಿಕರು ಎಚ್ಚರಿಕೆಯಿಂದ ಇರುವಂತೆಗ್ರಾಮಪಂಚಾಯತಿವತಿಯಿಂದ ಡಂಗೂರ ಸಾರಿ ಪ್ರವಾಹ ಮುನ್ನೆಚ್ಚರಿಕೆ ಕ್ರಮಕೈಗೊಳ್ಳಬೇಕು ಎಂದು ಸೂಚಿಸಿದರು. ಗ್ರಾಮ ಪಂಚಾಯತಿ ಮಟ್ಟದ ವಿಪತ್ತು ನಿರ್ವಹಣಾ ಸಭೆಯನ್ನು ಆದ್ಯತೆ ಮೇರೆಗೆ ಏರ್ಪಡಿಸಿ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.

ನಂತರ ದೇವರ ಹಿಪ್ಪರಗಿ ತಾಲೂಕ ಪಂಚಾಯಿತಿಗೆಭೇಟಿನೀಡಿ,ಹಳೆಯಪ್ರವಾಸಿ ಮಂದಿರದಲ್ಲಿತಾಲೂಕಪಂಚಾಯತಕಚೇರಿ ಕಾರ್ಯನಿರ್ವಹಿಸುತಿದ್ದು,ಹೊಸತಾಲೂಕು ಪಂಚಾಯಿತಿ ಕಚೇರಿ ನಿರ್ಮಾಣಕ್ಕಾಗಿ ಸ್ಥಳ ಗುರುತಿಸಿ ಜಿಲ್ಲಾ ಪಂಚಾಯಿತಿಗೆ ವರದಿ ನೀಡುವಂತೆ ತಾಲುಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ರಾಮು ಅಗ್ನಿ ಅವರಿಗೆ ಸೂಚಿಸಿದರು.

ಪ್ರತಿ ತಿಂಗಳ ಮೊದಲನೇ ಶನಿವಾರವನ್ನು "ಸ್ವಚ್ಛ ಶನಿವಾರ" ಎಂಬ ಪರಿಕಲ್ಪನೆ ಇಟ್ಟುಕೊಂಡು ತಾಲೂಕ ಪಂಚಾಯಿತಿ ಒಳಾಂಗಣ ಹಾಗೂ ಹೊರಾಂಗಣ ಆವರಣಗಳನ್ನು ಸ್ವಚ್ಛಗೊಳಿಸಬೇಕು, 'ೀಕು ಎಂದು ಸೂಚಿಸಿದರು. ಈ ಸಂದರ್ಭದಲ್ಲಿ ವಿಜಯಪುರ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ. ಹೊಂಗಯ್ಯ, ದೇವರ ಹಿಪ್ಪರಗಿ ತಾಲೂಕಿನ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಮು ಜಿ ಅಗ್ನಿ, ಸಹಾಯಕ ನಿರ್ದೇಶಕರು (ಪಂಚಾಯತ್ ರಾಜ್) ಶಿವಾನಂದ ಮೂಲಿಮನಿ,ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಸತೀಶ ಪಾಟೀಲ ಮತ್ತು ಸೆಕ್ಷನ್ ಅಧಿಕಾರಿ ಎಚ್. ಎಮ್. ಸಾರವಾಡ, ಪಂಚಾಯತ್ ರಾಜ್ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕಅಭಿಯಂತರರಾದಜಿ. ವಾಯ್. ಮುರಾಳ, ಬಸವನ ಬಾಗೇವಾಡಿ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ರಾಠೋಡ, ಹೆಗಡಿಹಾಳ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸರಿತಾ ಟಿ. ನಾಯಕ,

ಸಾತಿಹಾಳ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಎಂ. ಎನ್. ಕತ್ತಿ, ಯಾಳವಾರ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮಲ್ಲು ಮಸಳಿ, ಗ್ರಾಮ ಪಂಚಾಯತಿಯ ಸರ್ವ ಸದಸ್ಯರು, ತಾಲೂಕ ಪಂಚಾಯತ IEC ಸಂಯೋಜಕರಾದ ರಾಘವೇಂದ್ರ ಭಜಂತ್ರಿ, ಸಿದ್ದಪ್ಪ ಕಾಂಬಳೆ ಮತ್ತು ಗ್ರಾಮ ಪಂಚಾಯತ ಸಿಬ್ಬಂದಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ತುಪ್ಪರಿಹಳ್ಳ-ಬೆಣ್ಣಿಹಳ್ಳ ಹರಿಯುವ ಮಾರ್ಗದ ಹಳ್ಳಿಗಳಲ್ಲಿ ಪ್ರವಾಹದ ಬಗ್ಗೆ ಜಾಗೃತಿ ಮೂಡಿಸಿ: ಜಿಲ್ಲಾಧಿಕಾರಿ ದಿವ್ಯ ಪ್ರಭು

**ಧಾರವಾಡ :** ಜಿಲ್ಲೆಯ ಎರಡು ಪ್ರಮುಖ ಹಳ್ಳಗಳಾದ ತುಪ್ಪರಿಹಳ್ಳ ಮತ್ತು ಬೆಣ್ಣಿಹಳ್ಳ ಹರಿಯುವ ಮಾರ್ಗದ ಗ್ರಾಮಗಳಲ್ಲಿ ಪ್ರವಾಹದ ಕುರಿತು ಜಾಗೃತಿ ಮೂಡಿಸಬೇಕು ಮತ್ತು ಪ್ರವಾಹ ಉಂಟಾದಲ್ಲಿ ಜನ, ಜಾನುವಾರು ರಕ್ಷಣೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.



ಅವರು ಇಂದು ಬೆಳಿಗ್ಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ಜರುಗಿಸಿ, ಮಾತನಾಡಿದರು.

ಹವಾಮಾನ ಇಲಾಖೆ ಮಾಹಿತಿ ಪ್ರಕಾರ ಮುಂದಿನ ದಿನಗಳಲ್ಲಿ ಮಳೆ ಹೆಚ್ಚಳವಾಗುವ ಸಾಧ್ಯತೆ ಇದೆ. ತುಪ್ಪರಿಹಳ್ಳ ಮತ್ತು ಬೆಣ್ಣಿಹಳ್ಳ ಪ್ರವಾಹ ಉಂಟುಮಾಡಬಹುದು. ತಹಶೀಲ್ದಾರರು ಗ್ರಾಮಗಳಿಗೆ ಭೇಟಿ ನೀಡಿ, ಪ್ರವಾಹದಿಂದ ಹಾನಿ ಆಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಹೇಳಿದರು.

ಆರೋಗ್ಯ ಇಲಾಖೆ ಗ್ರಾಮಗಳಲ್ಲಿ ಫಾಗಿಂಗ್ ವ್ಯವಸ್ಥೆ ಮಾಡಬೇಕು. ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿಗಳು ಸಾಂಕ್ರಾಮಿಕ ರೋಗಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕೆಂದು ತಿಳಿಸಿದರು.

ಜಿಲ್ಲೆಯಲ್ಲಿ ಜೂನ್ 12 ರವರೆಗೆ 1.17 ಲಕ್ಷ ಹೆಕ್ಟರ್ ಭೂಮಿ ಬಿತ್ತನೆ ಆಗಿದೆ. ಕೃಷಿ ಇಲಾಖೆ ಅಧಿಕಾರಿಗಳು ಬಿತ್ತನೆ ಆಗಿರುವ ಬೆಳೆಗಳ ನಿರ್ವಹಣೆ ಮತ್ತು ಸಂರಕ್ಷಣೆಗೆ ಅಗತ್ಯ ಸಲಹೆಗಳನ್ನು ರೈತರಿಗೆ ನೀಡಬೇಕೆಂದು ಅವರು ಹೇಳಿದರು.

**ಬಿತ್ತನೆ ಬೀಜ ಮಾರಾಟ ಮತ್ತು ವಿತರಣೆ ವಿವರ:** ಜಿಲ್ಲೆಯಲ್ಲಿ ಉದ್ದು 520.4 ಕ್ವಿಂಟಲ್ ದಷ್ಟು ದಾಸ್ತಾನಿದೆ. ಈಗಾಗಲೇ 491.85 ಕ್ವಿಂಟಲ್ ಬೀಜ ವಿತರಣೆ ಮಾಡಲಾಗಿದ್ದು, 28.55 ಕ್ವಿಂಟಲ್ ದಷ್ಟು ಲಭ್ಯವಿದೆ. ಹೆಸರು 1,166.8 ಕ್ವಿಂಟಲ್ ದಷ್ಟು ದಾಸ್ತಾನಿದೆ. 971.55 ಕ್ವಿಂಟಲ್ ಬೀಜ ವಿತರಣೆ ಮಾಡಲಾಗಿದ್ದು, 195.25 ಕ್ವಿಂಟಲ್ ದಷ್ಟು ಲಭ್ಯವಿದೆ. ಶೇಂಗಾ 1,479.9 ಕ್ವಿಂಟಲ್ ದಷ್ಟು ದಾಸ್ತಾನಿದೆ. 1,230.3 ಕ್ವಿಂಟಲ್ ನಷ್ಟು ವಿತರಣೆ ಮಾಡಲಾಗಿದ್ದು, 249.6 ಕ್ವಿಂಟಲ್ ದಷ್ಟು ಲಭ್ಯವಿದೆ. ಭತ್ತ 200 ಕ್ವಿಂಟಲ್ ದಷ್ಟು ದಾಸ್ತಾನಿದೆ. 132.25 ಕ್ವಿಂಟಲ್ ಬೀಜ ವಿತರಣೆ ಮಾಡಲಾಗಿದ್ದು, 67.75 ಕ್ವಿಂಟಲ್ ದಷ್ಟು ಲಭ್ಯವಿದೆ. ತೊಗರಿ 62.4 ಕ್ವಿಂಟಲ್ ದಷ್ಟು ದಾಸ್ತಾನಿದೆ. 39.45 ಕ್ವಿಂಟಲ್ ಬೀಜ ವಿತರಣೆ ಮಾಡಲಾಗಿದ್ದು, 22.95 ಕ್ವಿಂಟಲ್ ದಷ್ಟು ಲಭ್ಯವಿದೆ. ಸೋಯಾಅವರೆ 11,160.9 ಕ್ವಿಂಟಲ್ ದಷ್ಟು ದಾಸ್ತಾನಿದೆ. 9,902.2 ಕ್ವಿಂಟಲ್ ಬೀಜ ವಿತರಣೆ ಮಾಡಲಾಗಿದ್ದು, 1,258.7 ಕ್ವಿಂಟಲ್ ದಷ್ಟು ಲಭ್ಯವಿದೆ. ಮೆಕ್ಕೆಜೋಳ 2,557.24 ಕ್ವಿಂಟಲ್ ದಷ್ಟು ದಾಸ್ತಾನಿದೆ. 1,751.5 ಕ್ವಿಂಟಲ್ ಬೀಜ ವಿತರಣೆ ಮಾಡಲಾಗಿದ್ದು, 805.74 ಕ್ವಿಂಟಲ್ ದಷ್ಟು ಲಭ್ಯವಿದೆ. ಒಟ್ಟಾರೆಯಾಗಿ 17,147.64 ಕ್ವಿಂಟಲ್ ದಷ್ಟು ದಾಸ್ತಾನಿದೆ. 14,519.1 ಕ್ವಿಂಟಲ್ ಬೀಜ ವಿತರಣೆ ಮಾಡಲಾಗಿದ್ದು, 2628.54 ಕ್ವಿಂಟಲ್ ದಷ್ಟು ಮಾರಾಟಕ್ಕೆ ಲಭ್ಯವಿದೆ ಎಂದು ಜಂಟಿ ಕೃಷಿ ನಿರ್ದೇಶಕ ಡಾ. ಕಿರಣಕುಮಾರ ಸಭೆಯಲ್ಲಿ ತಿಳಿಸಿದರು.

**ರಸಗೊಬ್ಬರ ಮಾರಾಟ ಮತ್ತು ದಾಸ್ತಾನು ವಿವರ:** ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಹಂಗಾಮಿಗೆ ಯೂರಿಯಾ ಗೊಬ್ಬರವು 27562 ಮೆಟ್ರಿಕ್ ಟನ್ ಬೇಡಿಕೆ ಇದೆ. ಏಪ್ರಿಲ್ ದಿಂದ ಇಲ್ಲಿಯವರೆಗೆ 12642.95 ಮೆಟ್ರಿಕ್ ಟನ್ ರಸಗೊಬ್ಬರ ಮಾರಾಟವಾಗಿದೆ. ಮತ್ತು 9252.87 ಮೆಟ್ರಿಕ್ ಟನ್ ಗೊಬ್ಬರ ದಾಸ್ತಾನು ಇದೆ.

16898 ಮೆಟ್ರಿಕ್ ಟನ್ ಡಿಎಪಿ ಗೊಬ್ಬರವು ಬೇಡಿಕೆ ಇದೆ. ಏಪ್ರಿಲ್ ದಿಂದ ಇಲ್ಲಿಯವರೆಗೆ 10418.18 ಮೆಟ್ರಿಕ್ ಟನ್ ರಸಗೊಬ್ಬರ ಮಾರಾಟವಾಗಿದೆ. ಮತ್ತು 1744.50 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಇದೆ.

ಪೊಟಾಷ್ ಗೊಬ್ಬರವು 1752 ಮೆಟ್ರಿಕ್ ಟನ್ ರಸ ಗೊಬ್ಬರವು ಬೇಡಿಕೆ ಇದೆ. ಏಪ್ರಿಲ್ ದಿಂದ ಇಲ್ಲಿಯವರೆಗೆ 284.90 ಮೆಟ್ರಿಕ್ ಟನ್ ರಸಗೊಬ್ಬರ ಮಾರಾಟವಾಗಿದೆ. 1607.95 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಇದೆ.

ಕಾಂಪ್ಲೆಕ್ಸ್ ಗೊಬ್ಬರವು 8,756 ಮೆಟ್ರಿಕ್ ಟನ್ ರಸಗೊಬ್ಬರ ಬೇಡಿಕೆ ಇದೆ. ಏಪ್ರಿಲ್ ದಿಂದ ಇಲ್ಲಿಯವರೆಗೆ 5586.76 ಮೆಟ್ರಿಕ್ ಟನ್ ರಸಗೊಬ್ಬರ ಮಾರಾಟವಾಗಿದೆ. 13222.67 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಇದೆ.

ಎಸ್.ಎಸ್.ಪಿ ಗೊಬ್ಬರವು 1275 ಮೆಟ್ರಿಕ್ ಟನ್ ಬೇಡಿಕೆ ಇದೆ. ಏಪ್ರಿಲ್ ದಿಂದ ಇಲ್ಲಿಯವರೆಗೆ 202.95 ಮೆಟ್ರಿಕ್ ಟನ್ ರಸಗೊಬ್ಬರ ಮಾರಾಟವಾಗಿದೆ. 470.15 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಇದೆ.ಮುಂಗಾರು ಹಂಗಾಮಿಗೆ ಜಿಲ್ಲೆಯಲ್ಲಿ 56243 ಮೆಟ್ರಿಕ್ ಟನ್ ವಿವಿಧ ರಸಗೊಬ್ಬರಗಳ ಬೇಡಿಕೆ ಇದ್ದು, ಏಪ್ರಿಲ್ ನಿಂದ ಇಲ್ಲಿಯವರೆಗೆ 29135.74 ಮೆಟ್ರಿಕ್ ಟನ್ ವಿವಿಧ ರಸಗೊಬ್ಬರಗಳು ಮಾರಾಟವಾಗಿದೆ. ಈಗ 26298.14 ಮೆಟ್ರಿಕ್ ರಸ ಗೊಬ್ಬರಗಳ ದಾಸ್ತಾನು ಇದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದರು. ಸಭೆಯಲ್ಲಿ ಉಪವಿಭಾಗಾಧಿಕಾರಿಗಳು, ತಹಶೀಲ್ದಾರರು, ಪಶುಪಾಲನೆ, ಅಗ್ನಿಶಾಮಕ, ಆರೋಗ್ಯ, ಮಹಾನಗರ ಪಾಲಿಕೆ, ಲೋಕೋಪಯೋಗಿ, ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

# ಬೆಳಗಾವಿ ಜಿಲ್ಲಾ ಕರ್ನಾಟಕ ಕ್ಷತ್ರಿಯ ಮರಾಠಾ ಪರಿಷತ ವಿಶೇಷ ಸಭೆ

**ಬೆಳಗಾವಿ :** ದಿನಾಂಕ 14 ಜೂನ 2024 ರಂದು ಬೆಳಗಾವಿ ಜಿಲ್ಲಾ ಕರ್ನಾಟಕ ಕ್ಷತ್ರಿಯ ಮರಾಠಾ ಪರಿಷತ ವತಿಯಿಂದ ಇಂದು ಚವಾಟ ಗಲ್ಲಿಯಲ್ಲಿ ಬೆಳಗಾವಿ ಜಿಲ್ಲಾ ಕೆ.ಕೆ.ಎಂ.ಪಿ. ಅಧ್ಯಕ್ಷರಾದ ಅನಿಲ ಬೆನಕೆ ಅವರ ಕಚೇರಿಯಲ್ಲಿ ವಿಶೇಷ ಸಭೆ ನಡೆಯಿತು.



ಈ ಸಭೆಯಲ್ಲಿ ಬೆಳಗಾವಿಯ ಎಲ್ಲಾ ತಾಲೂಕುಗಳ ಮುಖ್ಯ ಪದಾಧಿಕಾರಿಗಳು ಈ ಸಭೇಯಲ್ಲಿ ಭಾಗವಹಿಸಿದ್ದರು. ಮುಖ್ಯವಾಗಿ ಮರಾಠಾ ಸಮುದಾಯದ ಶಿಕ್ಷಣ, ಅಭಿವೃದ್ಧಿ ಮತ್ತು ಉನ್ನತಿಗಾಗಿ ಸಭೆಯನ್ನು ನಡೆಸಲಾಯಿತು ಹಾಗೂ ಬೆಳಗಾವಿಯ ಸದಾಶಿವ ನಗರದಲ್ಲಿ 22 ಗುಂಟಾ ಭೂಮಿಯನ್ನು ಮಾಜಿ ಮುಖ್ಯಮಂತ್ರಿ ಶ್ರೀ. ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಮುಖ್ಯಮಂತ್ರಿ ಶ್ರೀ. ಬಿ.ಎಸ. ಯಡಿಯುರಪ್ಪಾಜಿಯವರ ಆದೇಶದ ಮೇಲೆಗೆ ಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದ್ದು, ಸದರಿ ಜಾಗೆಯ ಅಭಿವೃದ್ಧಿಗಾಗಿ ಅನಿಲ ಬೆನಕೆ ಹಾಗೂ ಬೆಳಗಾವಿ ಜಿಲ್ಲೆ ಎಲ್ಲ ಕೆ.ಕೆ.ಎಂ.ಪಿ. ಪದಾಧಿಕಾರಿಗಳು ಹಾಗೂ ಪ್ರಮುಖ ಮುಖಂಡರ ಸಲಹೆ ಪಡೆದು ಮರಾಠಾ ಭವನ ನಿರ್ಮಾಣದ ಜವಾಬ್ದಾರಿಯನ್ನು ವಹಿಸಿಕೊಳ್ಳಲಾಗಿದೆ. ಹಾಗೂ ಈ ನಿಟ್ಟಿನಲ್ಲಿ ದಿನಾಂಕ 26-06-2024 ರಂದು ಜಿಲ್ಲೆಯ ಎಲ್ಲಾ ತಾಲೂಕು ಕೆ.ಕೆ. ಎಂ.ಪಿ. ಪದಾಧಿಕಾರಿಗಳ ಸಭೆಯನ್ನು ನಡೆಸಲು ತೀರ್ಮಾನಿಸಲಾಗಿದೆ, ಈ ಯೋಜನೆಯಲ್ಲಿ ಎಲ್ಲಾ ಪದಾಧಿಕಾರಿಗಳು ಮನ:ಪೂರ್ವಕವಾಗಿ ಭಾಗವಹಿಸುವುದಾಗಿ ಭರವಸೆ ನೀಡಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ 15 ಲಕ್ಷ ಮರಾಠಾ ಸಮಾಜದವರಿದ್ದು, ಚದುರಿದ ಸಮುದಾಯಕ್ಕೆ ಆಗಬೇಕಾದ ಕೆಲಸ ದೊಡ್ಡದು. ಎಲ್ಲಾ ಮರಾಠಾ ಸಮುದಾಯದವರನ್ನು ಒಂದೇ ಸೂರಿನಡಿ ತಂದು ಸಮುದಾಯವನ್ನು ಬಲಪಡಿಸುವ ಕಾರ್ಯವನ್ನು ಕೆ.ಕೆ. ಎಂ.ಪಿ. ಕೈಗೊಳ್ಳುವುದು ಎಂದು ಅನಿಲ ಬೆನಕೆ ಭರವಸೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಬೆಳಗಾವಿ ಕೆ.ಕೆ.ಎಂ.ಪಿ. ಜಿಲ್ಲಾಧ್ಯಕ್ಷ ಅನಿಲ ಬೆನಕೆ ಅವರೊಂದಿಗೆ ದಿಲೀಪ ಪವಾರ ಖಾನಾಪುರ ಜಿಲ್ಲಾ ಉಪಾಧ್ಯಕ್ಷ ಕೆ.ಕೆ.ಎಂ.ಪಿ., ಬಸವರಾಜ ಮ್ಯಾಗೋಟಿ, ಸಂಜೀವ ಭೋಸಲೆ, ಡಿ.ಬಿ.ಪಾಟೀಲ ಅಧ್ಯಕ್ಷ ಬೆಳಗಾವಿ ತಾಲೂಕಾ ಉಚಗಾಂವ, ಎಸ.ವಿ. ಜಾಧವ ಕಾರ್ಯದರ್ಶಿ ಬೆಳಗಾವಿ ತಾಲೂಕಾ ಉಚಗಾಂವ, ಮನೋಜ ಪಾಟೀಲ ದಕ್ಷಿಣ ಬೆಳಗಾವಿ, ಪ್ರಮೋದ ಬಿ. ಗುಂಜಿಕರ ದಕ್ಷಿಣ ಬೆಳಗಾವಿ, ರೋಹನ ಕದಮ ಉಪಾಧ್ಯಕ್ಷ ಬೆಳಗಾವಿ ತಾಲೂಕಾ, ಸುರೇಶ ಪಾಟೀಲ ಖಾನಾಪುರ, ರಾಹುಲ ಪವಾರ ಖಾನಾಪುರ ಮೊದಲಾದವರು ಉಪಸ್ಥಿತರಿದ್ದರು.

# ಜಿಲ್ಲಾಧಿಕಾರಿಗಳ ನಿರ್ದೇಶನ: ಡಿಎಚ್‌ಓ, ಎಸಿ ಅವರಿಂದ ಮುಮ್ಮಿಗಟ್ಟಿ ಗ್ರಾಮ ಭೇಟಿ; ಡೆಂಗ್ಯೂ ಪ್ರಕರಣಗಳ ಪರಿಶೀಲನೆ



**ಧಾರವಾಡ :** ಧಾರವಾಡ ತಾಲೂಕಿನ ಮುಮ್ಮಿಗಟ್ಟಿ ಗ್ರಾಮದಲ್ಲಿ ಡೆಂಗ್ಯೂ ಶಂಕಿತ ಬಾಲಕಿ ಸಾವು ಪ್ರಕರಣ ಹಾಗೂ ಡೆಂಗ್ಯೂ ಶಂಕಿತ 7 ಪ್ರಕರಣಗಳ ಪತ್ತೆಯಿಂದಾಗಿ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರ ನಿರ್ದೇಶನದ ಮೇರೆಗೆ ಇಂದು ಬೆಳಿಗ್ಗೆ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಶಶಿ ಪಾಟೀಲ ಮತ್ತು ಉಪವಿಭಾಗಾಧಿಕಾರಿ ಶಾಲಂ ಹುಸೇನ ಅವರು ಮುಮ್ಮಿಗಟ್ಟಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಡಿಎಚ್‌ಓ ಡಾ. ಶಶಿ ಪಾಟೀಲ ಹಾಗೂ ತಾಲೂಕು ವೈದ್ಯಾಧಿಕಾರಿ ಡಾ.ಕೆ.ಎನ್.ತನುಜಾ ಅವರ ನೇತೃತ್ವದ ಆಶಾ ಕಾರ್ಯಕರ್ತೆಯರ ತಂಡ ಗ್ರಾಮದಲ್ಲಿ ಹೆಚ್ಚು ಜ್ವರ ಪೀಡತರ ಓಣಿಗಳಿಗೆ ಭೇಟಿ ನೀಡಿ, ಮನೆಯಲ್ಲಿನ ಕುಟುಂಬದವರ ಅಭಿಪ್ರಾಯ ಸಂಗ್ರಹಿಸಿತು. ಸುಮಾರು 21 ಜನ ಆಶಾ ಕಾರ್ಯಕರ್ತೆರು ಗ್ರಾಮದ ಪ್ರತಿ ಮನೆಗೆ ಹೋಗಿ ಆರೋಗ್ಯ ಸಮೀಕ್ಷೆ ಮಾಡಿ, ಡೆಂಗ್ಯೂ, ಚಿಕನಗೂನ್ಯ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ಮುಮ್ಮಿಗಟ್ಟಿ ಗ್ರಾಮ ಪಂಚಾಯತ ಅಧ್ಯಕ್ಷೆ ಸುವರ್ಣಾ ಕೊಟ್ರಿ, ಉಪಾಧ್ಯಕ್ಷ ವಿಠ್ಠಲ ಬಟ್ಟಂಗಿ, ಗ್ರಾಮಪಂಚಾಯತ ಅಭಿವೃದ್ಧಿ ಅಧಿಕಾರಿ ಪರಶುರಾಮ ಕವಲೂರ ಮತ್ತು ಆರೋಗ್ಯ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಾನೂನುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಇರಬೇಕು:ಅಪರ್ಣಾ ಎಮ್. ಕೊಳ್ಳಾ

**ಬೆಳಗಾವಿ :** ಪೋ-ಕ್ಸೋ, ಬಾಲ್ಯವಿವಾಹ, ಬಾಲಕಾರ್ಮಿಕ ಹಾಗೂ ಇತ-ರೆ ಕಾನೂನು ವಿಷಯಗಳ ಬಗ್ಗೆ ಕಾನೂನು ವಿದ್ಯಾರ್ಥಿಗಳಿಗೆ ಅರಿವು ಹೊಂದುವದು ಅತೀ ಮುಖ್ಯವಾಗಿದೆ ಎಂದು ರಾಜ್ಯ ಮಕ್ಕಳ ಹಕ್ಕುಗಳು ರಕ್ಷಣಾ ಆಯೋಗದ ಸದಸ್ಯರಾದ ಅಪರ್ಣಾ ಎಮ್. ಕೊಳ್ಳಾ ಅವರು ಹೇಳಿದರು. ಬೈಲಹೊಂಗಲದ ಕೆ.ಆರ್.ಸಿ.ಇ. ಎಸ್. ಹೆಚ್.ವ್ಹಿ ಕೌಜಲಗಿ ಕಾನೂನು ಮಹಾವಿದ್ಯಾಲಯ ಇವರ ಸಹಯೋಗದಲ್ಲಿ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗ ನವದೆಹಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರ ನಿರ್ದೇಶದನ್ವಯ PAN INDIA Rescue and Rehabilitation Campaign of Child and Adolescent Labour ಅಡಿಯಲ್ಲಿ ಹಮ್ಮಿಕೊಂಡಿದ್ದ ಬಾಲಕಾರ್ಮಿಕ ನಿರ್ಮೂಲನಾ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳಾದ ಪಿ. ಮುರಳಿ ಮೋಹನ ರೆಡ್ಡಿ ಅವರು ಕಾನೂನು ವಿದ್ಯಾರ್ಥಿಗಳಿಗೆ ಸರ್ಕಾರಿ ನ್ಯಾಯಾಧೀಶರ ಪರೀಕ್ಷೆಗಳನ್ನು ಯಾವ ರೀತಿ ಅಧ್ಯಯನ ಮಾಡಬೇಕೆಂದು ತಿಳಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಮಹಾಂತೇಶ ಭಜಂತ್ರಿ ಬಾಲ್ಯ ವಿವಾಹ ನಿಷೇದ ಕಾಯ್ದೆ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವ ಕಾಯ್ದೆ, ದತ್ತು ಅಧಿನಿಯಮ ಕಾಯ್ದೆ, ಮತ್ತು ಬಾಲ ನ್ಯಾಯ ಕಾಯ್ದೆ (ಪೋಷಣೆ ಮತ್ತು ರಕ್ಷಣೆ) ಇತರೆ ಕಾಯ್ದೆ ಬಗ್ಗೆ ತಿಳಿಸುತ್ತಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಜಿಲ್ಲೆಯಲ್ಲಿರುವ ಏಕಪೋಷಕ, ಅನಾಥ, ಪರಿತ್ಯಕ್ತ, ಬಿಕ್ಷಾಟನೆ, ಬಾಲ ಕಾರ್ಮಿಕ, ಕಾಣೆಯಾದ ಮಕ್ಕಳು, ಮಾದಕ ವ್ಯಸನಿ ಮಕ್ಕಳು, ಲೈಂಗಿಕ ದೌರ್ಜನ್ಯ ಹಾಗೂ ಶಿಕ್ಷಣದಿಂದ ವಂಚಿತರಾದ ಮಕ್ಕಳು, ಬಾಲ್ಯ ವಿವಾಹಕ್ಕೊಳಗಾದ ಮಕ್ಕಳು ಹಾಗೂ ಇನ್ನಿತರ ಯಾವುದೆ ಸಮಸ್ಯೆ ಇರುವ ಮಕ್ಕಳ ಕುರಿತು ಈ ಕಛೇರಿಯು ಕಾರ್ಯ ನಿರ್ವಹಿಸುತ್ತದೆ. ಆದ್ದರಿಂದ ಯಾವುದೆ ಮಕ್ಕಳಿಗೆ ಯಾವುದೆ ಸಮಸ್ಯೆ ಇದ್ದರೆ ತಕ್ಷಣವೇ ಮಕ್ಕಳ ಸಹಾಯವಾಣಿ 1098/112ಗೆ ಕರೆ ಮಾಡಬೇಕೆಂದು ತಿಳಿಸಿದರು.

ನಂತರ ಬೈಲಹೊಂಗಲ ತಾಲೂಕಿನ ಅಂಗನವಾಡಿ ಕೇಂದ್ರಗಳಿಗೆ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಸದಸ್ಯರಾದ ಅಪರ್ಣಾ ಎಮ್. ಕೊಳ್ಳಾ ಅವರು ಭೇಟಿ ನೀಡಿ ವಾಸ್ತವದ ಸ್ಥಿತಿಗತಿಗಳನ್ನು ಹಾಗೂ ಮಕ್ಕಳ ಸಮಸ್ಯೆಗಳನ್ನು ಆಲಿಸಿ ಪರೀಶೀಲನೆ ನಡೆಸಿ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ, ಅಗತ್ಯದ ಸಲಹೆ ಸೂಚನೆಗಳನ್ನು ನೀಡಿದರು.

ತಾಲೂಕಿನ ವಕ್ಕುಂದ ಗ್ರಾಮದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂರಾರ್ಜಿ ದೇಸಾಯಿ ವಸತಿ ಶಾಲೆಗೆ ಹಾಗೂ ಇಂದಿರಾನಗರದ ಸರ್ಕಾರಿ ಮಾದರಿ ಪ್ರಾಥಮಿಕ ಕನ್ನಡ ಶಾಲೆಗೆ ಭೇಟಿ ನೀಡಿ ಮಕ್ಕಳ ಜೊತೆ ಮಾತನಾಡಿ ಅವರ ಸಮಸ್ಯೆಗಳನ್ನು ಆಲಿಸಿ ಶಾಲೆಯ ಎಲ್ಲ ಸಿಬ್ಬಂದಿಗಳಿಗೆ ಮಕ್ಕಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ಕಡಕ್ ಸೂಚನೆ ನೀಡಿದರು.

# ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರ ಪ್ರವಾಸ ವಿವರ

**ವಿಜಯಪುರ :** ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ ಅವರು ಜೂ.19ರಿಂದ 21ರವರೆಗೆ ವಿಜಯಪುರ ಜಿಲ್ಲಾ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಜೂ.19ರಂದು ಬೆಳಿಗ್ಗೆ 6ಗಂಟೆಗೆ ವಿಜಯಪುರಕ್ಕೆ ಆಗಮಿಸಿ, ಅಂದು ಬೆಳಿಗ್ಗೆ 8 ರಿಂದ ರಾತ್ರಿ 8 ಗಂಟೆಯವರೆಗೆ ವಸತಿ ಶಾಲೆ, ವಸತಿ ನಿಲಯ, ಜಿಲ್ಲಾ ಆಸ್ಪತ್ರೆ ಅಂಗನವಾಡಿ, ಮಕ್ಕಳ ಪಾಲನಾ ಸಂಸ್ಥೆ ಹಾಗೂ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಜೂ.20ರಂದು ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಕ್ಕಳ ರಕ್ಷಣಾ ವ್ಯವಸ್ಥೆ ಕುರಿತು ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಂಜೆ 6 ಗಂಟೆಗೆ ವಿಜಯಪುರದಿಂದ ಸಿಂದಗಿಗೆ ಪ್ರಯಾಣ ಬೆಳೆಸಿ, ರಾತ್ರಿ 8 ಗಂಟೆಗೆ ಸಿಂದಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪರಿಶೀಲನೆ ನಡೆಸಿ, ಮಕ್ಕಳೊಂದಿಗೆ ಊಟ ಮತ್ತು ವಾಸ್ತವ್ಯ ಮಾಡಲಿದ್ದಾರೆ.

ಜೂ.21ರಂದು ಬೆಳಿಗ್ಗೆ 6 ಗಂಟೆಗೆ ಮಕ್ಕಳೊಂದಿಗೆ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಬೆಳಿಗ್ಗೆ 8 ಗಂಟೆಗೆ ಸಿಂದಗಿಯಿಂದ ಬೀದರ್ ಜಿಲ್ಲೆಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಆಡಳಿತ ನ್ಯಾಯಾಧೀಕರಣ ತರಬೇತಿಗೆ ಅರ್ಜಿ ಆಹ್ವಾನ

**ವಿಜಯಪುರ :** ಸಮಾಜ ಕಲ್ಯಾಣ ಇಲಾಖೆಯಿಂದ 2024-25ನೇ ಸಾಲಿಗಾಗಿ ಪರಿಶಿಷ್ಟ ಜಾತಿಯ ಹಾಗೂ ಪರಿಶಿಷ್ಟ ಪಂಗಡದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣ ತರಬೇತಿ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿಜಯಪುರ ಜಿಲ್ಲೆಯಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿಯ ಹಾಗೂ ಪರಿಶಿಷ್ಟ ಪಂಗಡದ ಕಾನೂನು ಪದವೀಧರರು ಆನ್‌ಲೈನ್ ಮೂಲಕ ಅರ್ಜಿಯನ್ನು ಪರಿಶಿಷ್ಟಜಾತಿ ಅಭ್ಯರ್ಥಿಗಳು sw.kar.nic.inರಲ್ಲಿ & ಪರಿಶಿಷ್ಟಪಂಗಡದಅಭ್ಯರ್ಥಿಗಳು st.kar.nic.inರಲ್ಲಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ತಿಳಿಸಲಾಗಿದೆ. ಜೂನ್ 18 ರಿಂದ ಅರ್ಜಿಸಲ್ಲಿಸಬಹುದಾಗಿದ್ದು, ಜುಲೈ 31 ಕೊನೆಯ ದಿನವಾಗಿದೆ. ಆನ್‌ಲೈನ್ ಅರ್ಜಿ ನಮೂನೆ ಹಾಗೂ ಅಗತ್ಯ ದಾಖಲೆಗಳಿಗೆ ಪತ್ರಾಂಕಿತ ಅಧಿಕಾರಿಗಳಿಂದ ದೃಢಿಕರಣದೊಂದಿಗೆ ಅರ್ಜಿಯನ್ನು ಉಪನಿರ್ದೇಶಕರು, ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಕಚೇರಿಗಳಿಗೆ ಸಲ್ಲಿಸತಕ್ಕದ್ದು ಮತ್ತು ಇತರೆ ಹೆಚ್ಚಿನ ವಿವರಗಳಿಗಾಗಿ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ವಿಜಯಪುರ ಇಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಸಮಾಜಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಪುಂಡಲೀಕ ಮಾನವರ ತಿಳಿಸಿದ್ದಾರೆ.

# ದೀನದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ ಅರ್ಜಿ ಆಹ್ವಾನ

**ವಿಜಯಪುರ :** ವಿಜಯಪುರ ಮಹಾನಗರಪಾಲಿಕೆ ವತಿಯಿಂದ 2024-25ನೇ ಸಾಲಿನ ಕೇಂದ್ರ ಪುರಸ್ಕೃತ ಯೋಜನೆಯಾದ ದೀನ್‌ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ ಉಪ ಘಟಕವಾರು ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗದಿಪಡಿಸಿದ್ದು, ಸ್ವ-ಯಂ ಉದ್ಯೋಗ(ದ್ವಿ-ಪ್ರತಿ ಅರ್ಜಿ)-78, ಗುಂಪು ಸಮೂಹ ಉದ್ಯಮಗಳು ಯೋಜನೆ-06, ಸ್ವಸಹಾಯ ಗುಂಪುಗಳ ರಚನೆ-201, ಸ್ವಸಹಾಯ ಗುಂಪುಗಳ ಬ್ಯಾಂಕ ಲಿಂಕೇಜ್-101 ಸದರಿ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬಿಪಿಎಲ್/ಅಂತ್ಯೋದಯ ರೇಷನ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್, ಮತದಾರರ ಗುರುತೀನ ಚೀಟಿ, ವಿದ್ಯಾರ್ಹತೆ ಪ್ರಮಾಣ ಪತ್ರ ಮತ್ತು ಇತ್ತೀಚಿನ ಎರಡು ಭಾವಚಿತ್ರಗಳೊಂದಿಗೆ ದ್ವಿಪ್ರತಿಯಲ್ಲಿ ಕನಿಷ್ಠ 18 ರಿಂದ 50 ವಯಸ್ಸಿನ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಜೂನ್ 26 ರಂದು ಸಾಯಂಕಾಲ 5 ಗಂಟೆ-ಯ ಒಳಗಾಗಿ ಮಹಾನಗರ ಪಾಲಿಕೆಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಯಾಗಿ ಮಹಾನಗರಪಾಲಿಕೆಯ ಡೇ-ನಲ್ಮ್ ವಿಭಾಗವನ್ನು ಸಂಪರ್ಕಿಸಬಹುದು ಎಂದು ಮಹಾನಗರಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೊಪ್ಪಳ ತಹಶೀಲ್ ಕಚೇರಿಯ ಶಿರಸ್ತೇದಾರ ಲೋಕಾಯುಕ್ತ ಬಲೆಗೆ

**ಕೊಪ್ಪಳ :** ಅರ್ಜಿದಾರರಿಂದ ಲಂಚದ ಹಣ ಪಡೆಯುವಾಗ ಕೊಪ್ಪಳ ತಹಶೀಲ್ದಾರ ಕಚೇ-ರಿಯ ಶಿರಸ್ತೇದಾರ ಆದ ಸುನೀಲ್‌ಕುಮಾರ್ ಕುಲಕರ್ಣಿಯವರನ್ನು ಕೊಪ್ಪಳ ಲೋಕಾಯುಕ್ತರು ಬಂಧಿಸಿದ್ದಾರೆ.

**ಪ್ರಕರಣ:** ಕೊಪ್ಪಳದ ತಹಶೀಲ್ದಾರ ಕಚೇರಿಯಲ್ಲಿ ಶಿರಸ್ತೇದಾರ ಆಗಿ ಕಾರ್ಯನಿರ್ವಹಿಸುತ್ತಿರುವ ಸುನೀಲ್‌ಕುಮಾರ ಕುಲಕರ್ಣಿ(53 ವರ್ಷ) ಇವರು ಫಿರ್ಯಾದುದಾರರಾದ ಕರಿಯಪ್ಪ ಕೊಳ್ಳಿ ಅವರ ಮಗನ ಯೋಜನಾ ನಿರಾಶ್ರಿತ ಪ್ರಮಾಣ ಪತ್ರ ನೀಡಲು ರೂ.50,000/-ಗಳ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಫಿರ್ಯಾದುದಾರರು ಚೌಕಾಸಿ ಮಾಡಿ ರೂ.37000/- ಗೆ ಬೇಡಿಕೆ ಇಟ್ಟಿದ್ದು, ಜೂನ್ 13 ರಂದು ಫಿರ್ಯಾದುದಾರರಿಂದ ಲಂಚದ ಹಣ ರೂ.37000/- ಗಳನ್ನು ಪಡೆಯುವಾಗ ಲೋಕಾಯುಕ್ತರು ದಾಳಿ ಮಾಡಿ ಸುನೀಲ್ ಕುಮಾರ ಅವರನ್ನು ವಶಕ್ಕೆ ಪಡೆದಿದ್ದು, ಹಣ ಜಪ್ತಿ ಮಾಡಿ ಪ್ರಕರಣದ ತನಿಖೆ ನಡೆಸಿದ್ದಾರೆ.

ಲೋಕಾಯುಕ್ತ ಎಸ್‌ಪಿ, ರಾಯಚೂರು ಅವರ ಮಾರ್ಗದರ್ಶನದಲ್ಲಿ ಕೊಪ್ಪಳ ಪ್ರಭಾರಿ ಲೋಕಾಯುಕ್ತ ಡಿಎಸ್‌ಪಿ ಚಂದ್ರಪ್ಪ ಈಟಿ ಅವರ ನೇತೃತ್ವದಲ್ಲಿ ದಾಳಿ ನಡೆಸಲಾಗಿತ್ತು. ಈ ಸಂದರ್ಭ ಲೋಕಾಯುಕ್ತ ಪಿಐ ಅವರಾದ ಶೈಲಾ ಪ್ಯಾಟಿಶೆಟ್ರ, ರಾಜೇಶ ಬಟಗುರ್ಕಿ, ಸುನೀಲ್ ಹಾಗೂ ವಿಜಯಕುಮಾರ ಹಾಗೂ ಸಿಬ್ಬಂದಿಗಳು ಲೋಕಾಯುಕ್ತ ತಂಡದಲ್ಲಿದ್ದರು ಎಂದು ಕೊಪ್ಪಳ ಲೋಕಾಯುಕ್ತ ಕಚೇರಿ ಪ್ರಕಟಣೆ ತಿಳಿಸಿದೆ.

## ಆರೋಗ್ಯ ಇಲಾಖೆಯ ವಿವಿಧ ಸಮಿತಿಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ

# ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಕ್ರಮ ವಹಿಸಿ: ಡಿಸಿ ನಲಿನ್ ಅತುಲ್

**ಕೊಪ್ಪಳ :** ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ ನಿಯಮನುಸಾರ ನಿಗದಿತ ಅವಧಿಯಲ್ಲಿ ಲಸಿಕಾಕರಣ ಅಭಿಯಾನವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಅಭಿಯಾನದಲ್ಲಿ ಜಿಲ್ಲೆಯ ಯಾವುದೇ ಮಗು ಲಸಿಕೆಯಿಂದ ವಂಚಿತರಾಗದಂತೆ ಕ್ರಮ ವಹಿಸಿ ಎಂದು ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿವಿಧ ಸಮಿತಿಗಳ ಜಿಲ್ಲಾ ಮಟ್ಟದ ಸಮನ್ವಯ ಹಾಗೂ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಗು ಹುಟ್ಟಿದಾಗಿಂದ 16 ವರ್ಷದವರೆಗೆ ನಿಗದಿತಅವಧಿಯಲ್ಲಿಲಸಿಕೆಯನ್ನುನೀಡಬೇಕು. ಪೋಲೀಯೋ, ದಡಾರ, ರುಬೆಲ್ಲಾದಂತಹ ಮಾರಕ ಖಾಯಿಲೆಗಳಿಂದ ಲಸಿಕೆಗಳು ಮಕ್ಕಳನ್ನು ರಕ್ಷಿಸುತ್ತವೆ. ಈ ಬಗ್ಗೆ ಮಗುವಿನ ಜನನದ ಸಮಯದಲ್ಲಿ ಪೋಷಕರಿಗೆ ವೈದ್ಯರು ಸೂಕ್ತ ತಿಳುವಳಿಕೆ ನೀಡಬೇಕು. ಲಸಿಕೆ ಪಡೆದ ಮಕ್ಕಳ ಸಮೀಕ್ಷೆ ಸಂದರ್ಭದಲ್ಲಿ ಲಸಿಕೆ ಪಡೆಯದ ಮಕ್ಕಳ ಮಾಹಿತಿ ದೊರೆ-ಯುತ್ತದೆ. ಅಂತಹ ಮಕ್ಕಳು ಲಸಿಕೆಯಿಂದ ವಂಚಿತರಾಗಿರುವುದಕ್ಕೆ ಕಾರಣಗಳನ್ನು ತಿಳಿದು, ಮುಂದಿನ ದಿನಗಳಲ್ಲಿ ಅದು ಮರುಕಳಿಸದಂತೆ ಪೋಷಕರಿಗೆ ತಿಳಿಸಬೇಕು. ಜಿಲ್ಲೆಯ ಎಲ್ಲ ಶಾಲೆ, ಅಂಗನವಾಡಿಗಳಲ್ಲಿ ಪೂರ್ವಪ್ರಾಥಮಿಕ ಶಿಕ್ಷಣ ಆರಂಭಗೊಂಡಿದ್ದು, ಈ ಸಮಯದಲ್ಲಿ ಶಾಲೆಗೆ ಮಕ್ಕಳು ದಾಖಲಾಗುವಾಗ ಆ ಮಗು ಆ ಸಮಯದವರೆಗಿನ ನಿರ್ದಿಷ್ಟ ಲಸಿಕೆಗಳನ್ನು ಪಡೆದಿರುವ ಕುರಿತು ಖಾತ್ರಿಪಡಿಸಿಕೊಳ್ಳಿ. ಮಗುವಿನ ಪ್ರತಿ ಲಸಿಕೆಯ ಬಗ್ಗೆ ತಾಯಿ ಕಾರ್ಡ್‌ಗಳಲ್ಲಿದಾಖಲು ಮಾಡಿರುತ್ತದೆ. ಒಂದು ವೇಳೆ ತಾಯಿ ಕಾರ್ಡ್ ಇಲ್ಲದಿದ್ದಲ್ಲಿ ಮಗು ಲಸಿಕೆ ಪಡೆದ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ಪರ್ಯಾಯ ಮಾರ್ಗ, ದಾಖಲೆಗಳನ್ನು ಹುಡುಕಿ. ಜಿಲ್ಲೆಯ ಯಾವ ಮಗುವೂ ಲಸಿಕೆಯಿಂದ ವಂಚಿತವಾಗದಂತೆ ಅಗತ್ಯ ಕ್ರಮ ವಹಿಸಿ ಎಂದು ಅವರು ಅಧಿಕಾರಿಗಳಿಗೆ ತಿಳಿಸಿದರು.

ತಾಯಿ ಮತ್ತು ಶಿಶು ಮರಣ ಪ್ರಮಾಣ ಪರಿಶೀಲನಾ ಸಭೆ :

ಹೆರಿಗೆ ಸಂದರ್ಭ ಹಾಗೂ ಹೆರಿಗೆಯ ನಂತರ ತಾಯಂದಿರು ಮರಣ ಹೊಂದಲು ರಕ್ತಹೀನತೆ, ಅಧಿಕ ಹಾಗೂ ಕಡಿಮೆ ರಕ್ತದೊತ್ತಡ, ಹೆರಿಗೆ ಸಮಯದಲ್ಲಿನ ಆಘಾತದಿಂದ ಹೃದಯದ ತೊಂದರೆ ಸೇರಿದಂತೆ ಅನೇಕ ಕಾರಣಗಳಿಂದ ಮರಣ ಹೊಂದಬಹುದು. ಆದ್ದರಿಂದ ಗರ್ಭಿಣಿ ಮಹಿಳೆಯ ಕುಟುಂಬದವರು, ಆಶಾ ಕಾರ್ಯಕರ್ತೆಯರು, ಸ್ಥಳೀಯ ಅಥವಾ ಗರ್ಭಿಣಿ ಮಹಿಳೆಯ ತಪಾಸಣೆ ಮಾಡುವ ವೈದ್ಯಾಧಿಕಾರಿಗಳು ಪ್ರಾರಂಭದಲ್ಲಿಯೇ ಆಕೆಯ ಆರೋಗ್ಯ ಸಮಸ್ಯೆಯನ್ನು ಗುರುತಿಸಿ, ಸೂಕ್ತ ಚಿಕತ್ಸೆಹಾಗೂಆರೈಕೆಗೆಶಿಫಾರಸುಮಾಡಬೇಕು. ತಾಯಿ ಕಾರ್ಡ್‌ಗಳಲ್ಲಿ ತೊಡಕಿನ ಗರ್ಭಧಾರಣೆ ಹಾಗೂ ತೊಡಕಿಲ್ಲದ ಗರ್ಭಧಾರಣೆ ಎಂದು ಕಡ್ಡಾಯವಾಗಿ ನಮೂದಿಸಬೇಕು ಎಂದು ಜಿಲ್ಲಾಧಿಕಾರಿಗಳು ಆಶಾ ಹಾಗೂ ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಲಿಂಗರಾಜು ಟಿ ಅವರು ಮಾತನಾಡಿ, ಹೆರಿಗೆ ಸಂದರ್ಭ ಹಾಗೂ ಹೆರಿಗೆ ನಂತರದಲ್ಲಿ ಮೃತಪಡುವ ತಾಯಂದಿರ ಪ್ರಕರಣಗಳಲ್ಲಿ ಮಹಿಳೆ ಗರ್ಭಿಣಿಯಾದಾಗಿನಿಂದ ರಕ್ತಹೀನತೆಯಿಂದ ಬಳಲುತ್ತಿದ್ದು, ಸೂಕ್ತ ಚಿಕತ್ಸೆ ಹಾಗೂ ಆರೈ-ಕೆಯ ಕೊರತೆಯಿಂದ ಹೆರಿಗೆ ಸಂದರ್ಭದಲ್ಲಿ ರಕ್ತದೊತ್ತಡ, ಹೆರಿಗೆ ಸಮಯದಲ್ಲಿನ ತೀವ್ರ ಆಘಾತಕ್ಕೆ ಒಳಗಾಗಿರುವುದು ಕಂಡು ಬಂದಿರುತ್ತದೆ. ಇಂತಹ ಪ್ರಕರಣಗಳಲ್ಲಿ ಬಹಳಷ್ಟು ಪ್ರಕರಣಗಳು ಬೇರೆ ಜಿಲ್ಲೆಯ ಪ್ರಕರಣಗಳಾಗಿದ್ದು, ಗರ್ಭಿಣಿ ತೀವ್ರ ಗಂಭೀರ ಪರಿಸ್ಥಿತಿ ತಲುಪಿದ ನಂತರ ಆಕೆಯನ್ನು ಜಿಲ್ಲೆಯ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗುತ್ತದೆ. ಕೆಲ ಪ್ರಕರಣಗಳಲ್ಲಿ ಹೆರಿಗೆಯ ನಂತರ ವೈದ್ಯರ ಸಲಹೆಯನ್ನು ಮೀರಿ ಬಾಣಂತಿ ಹಾಗೂ ಮಗುವನ್ನು ಮನೆಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಇತರೆ ಕಾರಣಗಳಿಂದ ಆಗುವ ಸೋಂಕುಗಳಿಂದ ಮಹಿಳೆ ಅಥವಾ ಮಗು ಸಾವನ್ನಪ್ಪಬಹುದು. ಆದ್ದರಿಂದ ಜಿಲ್ಲೆಯ ಪ್ರಸೂತಿ ತಜ್ಞರು ತಮ್ಮ ಹಂತದಲ್ಲಿ ನಿರ್ವಹಣೆ ಮಾಡಲು ಸಾಧ್ಯವಾಗದ ಪ್ರಕರಣಗಳನ್ನು ಕೂಡಲೇ ಜಿಲ್ಲಾಸ್ಪತ್ರೆ ಅಥವಾ ಕಿಮ್ಸ್‌ಗೆ ಶಿಫಾರಸ್ಸು ಮಾಡುವಂತೆ ಸೂಚನೆ ನೀಡಲಾಗಿದೆ. ಬೇರೆ ಜಿಲ್ಲೆಯ ಪ್ರಕರಣಗಳಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳು ಹಾಗೂ ವೈದ್ಯಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದರು.



**ಕ್ಷಯರೋಗ ಪಾಲುದಾರರ ಸಭೆ:** ಜಿಲ್ಲೆಯಲ್ಲಿ ನಿರ್ದಿಷ್ಟವಾಗಿ ಕ್ಷಯರೋಗ ಬಾಧಿತ ಅಥವಾ ಹೆಚ್ಚಿನ ಸಂಖ್ಯೆಯಲ್ಲಿ ಕ್ಷಯರೋಗಿಗಳಿರುವ ತಾಲ್ಲೂಕನ್ನು ಗುರುತಿಸಿ, ಆ ತಾಲ್ಲೂಕಿನಾದ್ಯಂತ ರ್ಯಾಂಡಮ್ ಆಗಿ ಮಾದರಿ ಪರೀಕ್ಷೆಗಳನ್ನು ಮಾಡಿ. ಈ ಪ್ರಯೋಗದಿಂದ ನಿರ್ದಿಷ್ಟ ಪ್ರದೇಶದಲ್ಲಿ ಎಷ್ಟು ಜನ ಕ್ಷಯರೋಗಿಗಳು ಇದ್ದಾರೆ ಮತ್ತು ಅದಕ್ಕೆ ಕಾರಣಗಳು, ತಡೆಗಟ್ಟುವ ಕ್ರಮಗಳ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಿ. ಕ್ಷಯ-ರೋಗ ಸಂಪೂರ್ಣ ವಾಸಿ ಮಾಡಬಹುದಾದ ಖಾಯಿಲೆಯಾಗಿದ್ದು, ಅದನ್ನು ಪ್ರಾರಂಭಿಕ ಹಂತದಲ್ಲಿಯೇ ಗುರುತಿಸಿ, ಸೂಕ್ತ ಹಾಗೂ ನಿರಂತರ ಚಿಕಿತ್ಸೆ ಪಡೆಯುವುದು ಮುಖ್ಯ. ಈ ಬಗ್ಗೆ ಜಿಲ್ಲೆಯಾದ್ಯಂತ ಜನರಲ್ಲಿ ಜಾಗೃತಿ ಮೂಡಿಸಿ. ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗುವ ಉಚಿತ ಪರೀಕ್ಷೆ, ಚಿಕಿತ್ಸೆ, ಸೌಲಭ್ಯಗಳ ಬಗ್ಗೆ ತಿಳುವಳಿಕೆ ಮೂಡಿಸಿ ಎಂದು ಜಿಲ್ಲಾಧಿಕಾರಿಗಳು ಕ್ಷಯ-ರೋಗ ನಿರ್ಮೂಲನಾಧಿಕಾರಿಗೆ ತಿಳಿಸಿದರು.

ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಶಶಿಧರ ಅವರು ಮಾತನಾಡಿ, ಜನಸಂಖ್ಯೆ ಆಧಾರದಲ್ಲಿ ಟಿಬಿ ಪರೀಕ್ಷೆಗಳನ್ನು ನಡೆಸಿ ಜಿಲ್ಲೆಯಾದ್ಯಂತ 09 ಗ್ರಾಮ ಪಂಚಾಯತಿಗಳನ್ನು ಕ್ಷಯರೋಗಮುಕ್ತ ಗ್ರಾಮ ಪಂಚಾಯತಿಗಳೆಂದು ಗುರುತಿಸಲಾಗಿದೆ. ಪ್ರಸಕ್ತ ವರ್ಷ ಇನ್ನೂ 11 ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಲಾಗಿದ್ದು, ಸಂಬಂಧಿಸಿದ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಗ್ರಾಮ ಸಭೆ, ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲಿ ಟಿಬಿ ಪರೀಕ್ಷೆ, ಚಿಕಿತ್ಸೆ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಗವಿಮಠದ ಗವಿಸಿದ್ದೇಶ್ವರ ಸ್ವಾಮೀಜಿ ಹಾಗೂ ಗಂಗಾವತಿ ಪ್ರಾಣೇಶ ಅವರನ್ನು ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದ ರಾಯಭಾರಿಗಳನ್ನಾಗಿ ಮಾಡಲಾಗಿದ್ದು, ಇವರ ಮೂಲಕ ವಿವಿಧ ಜಾಗೃತಿ ಜಾಥಾ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಗ್ರಾಮ ಮಟ್ಟಗಳಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು, ಮಹಿಳಾ ಸಂಘಗಳ ಅಧ್ಯಕ್ಷರ ನೇತೃತ್ವದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಪ್ರತಿ ತಿಂಗಳ 24ನೇ ತಾರೀಖಿನಂದು ನಿಕ್ಷಯ ದಿವಸ ಹಾಗೂ ಪ್ರತಿ ಗುರುವಾರದಂದು ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ, ಸಾಲೆ, ಕೆಲಸದ ಸ್ಥಳಗಳಲ್ಲಿ ಕ್ಷಯಮುಕ್ತ ವಾತಾವರಣಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನ ಮಾಡಲಾಗುತ್ತಿದೆ. ರೋಗವನ್ನು ತಡವಾಗಿ ಗುರುತಿಸುವುದು ಕ್ಷಯರೋಗಿಗಳ ಸಾವಿಗೆ ಮುಖ್ಯ ಕಾರಣವಾಗುವುದರಿಂದ ಪ್ರಾರಂಭಿಕ ಲಕ್ಷಣಗಳು ಕಂಡುಬಂದ ಕೂಡಲೇ ಪರೀಕ್ಷೆಗೆ ಒಳಪಡುವಂತೆ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲಾಗುತ್ತಿದೆ ಎಂದು ಮಾಹಿತಿ ನೀಡಿ-ದರು.

**ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ:** ಜಿಲ್ಲೆಯಲ್ಲಿ ತಂಬಾಕು ಉತ್ಪನ್ನಗಳಿಂದ ಶಾಲಾ, ಕಾಲೇಜು ಮಕ್ಕಳು ಯುವಕರು ಹೆಚ್ಚು ತೊಂದರೆಗೊಳಗಾಗುವ ಸಾಧ್ಯತೆ ಇರುತ್ತದೆ. ಇಂತಹ ವಸ್ತುಗಳು ಮಕ್ಕಳನ್ನು, ಯುವಕರನ್ನು ಹೆಚ್ಚಾಗಿ ಆಕರ್ಷಿಸುತ್ತವೆ. ಆದ್ದ-ರಿಂದ ಜಿಲ್ಲೆಯ ಎಲ್ಲಾ ಶಾಲಾ, ಕಾಲೇಜುಗಳಲ್ಲಿ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಿ. ಶಾಲೆ, ಕಾಲೇಜುಗಳ ಸುತ್ತ ಮುತ್ತ ನಿಗದಿತ ಅಂತರದಲ್ಲಿ ತಂಬಾಕು ಉತ್ಪನ್ನಗಳ ಮರಾಟ ಮಾಡುವುದು ಗಂಭೀರ ಅಪರಾಧವಾಗಿದ್ದು, ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಶಾಲಾ ಮುಖ್ಯೋಪಾಧ್ಯಾಯರುಈಬಗ್ಗೆಗಮನವಹಿಸಿ ಅಗತ್ಯ ಕ್ರಮ ವಹಿಸಬೇಕು. 18 ವರ್ಷ ಕೆಳಗಿನ ಮಕ್ಕಳಿಗೆ ತಂಬಾಕು, ತಂಬಾಕು ಉತ್ಪನ್ನಗಳ ಮಾರಾಟ ಮಾಡುವುದು ಕಂಡುಬಂದಲ್ಲಿ ಅಂತಹವರಿಗೆ ಕೋಟ್ಪಾ ಕಾಯಿದೆ ಮಾತ್ರವಲ್ಲದೆ ಬಾಲ ನ್ಯಾಯ ಮಂಡಳಿ ಕಾಯ್ದೆ(ಮಕ್ಕಳ ಆರೈಕೆ ಮತ್ತು ರಕ್ಷಣೆ ಕಾಯ್ದೆ) ಅನ್ವಯ ದೂರು ದಾಖಲಿಸಿ ಕ್ರಮ ಕೈಗೊಳ್ಳಬೇಕು. ಸ್ಥಳೀಯ ಸಂಸ್ಥೆಗಳಲ್ಲಿ ತಂಬಾಕು ಮಾರಾಟ ಅಂಗಡಿಗಳಿಗೆ ಪರವಾನಿಗೆ ನೀಡುವಾಗಿ ಕೋಟ್ಪಾ ಕಾಯಿದೆಯ ಕಲಂ 05, 6ಎ, 6ಬಿ ಹಾಗೂ ಇತರೆ ನಿರ್ದಿಷ್ಟ ಕಲಂಗಳ ಬಗ್ಗೆ ಮಾಹಿತಿ ನೀಡಿ, ಕಡ್ಡಾಯವಾಗಿ ಪಾಲಿಸುವಂತೆ ನಿಯಮವನ್ನು ಹಾಕಿ ಪರವಾನಿಗೆ ನೀಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ.ನಂದಕುಮಾರ ಎಚ್. ಅವರು ಮಾತನಾಡಿ, ಜಿಲ್ಲೆಯಾದ್ಯಂತ 18629 ಶಾಲಾ ಮಕ್ಕಳಿಗೆ ತಂಬಾಕು ಉತ್ಪನ್ನಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲಾಗಿದೆ. ಜಾಥಾಗಳ ಮೂಲಕ, ಬೀದಿ ನಾಟಕ, ವಿವಿಧ ಕಾರ್ಯಕ್ರಮಗಳಲ್ಲಿ ಈ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗುತ್ತಿದೆ. ತಂಬಾಕು ವ್ಯಸನಿಗಳಿಗೆ ಸೂಕ್ತ ಪುನರ್ವಸತಿ ಕಲ್ಪಿಸಿ, ವ್ಯಸನಮುಕ್ತರನ್ನಾಗಿ ಮಾಡಲು ಜಿಲ್ಲಾ ಆಸ್ಪತ್ರೆಯಲ್ಲಿ ಪ್ರತ್ಯೇಕ ಘಟಕ ಕಾರ್ಯನಿರ್ವಹಿಸುತ್ತಿದೆ. ಇಲ್ಲಿ ಸೂಕ್ತ ಆಪ್ತಸಮಾಲೋಚನೆ, ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಕೋಟ್ಪಾ ಕಾಯ್ದೆಯ ಸಮರ್ಪಕ ಅನುಷ್ಠಾನ ಹಾಗೂ ವ್ಯಸನ ಮುಕ್ತ ವಾತಾವರಣ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಕೈಗೊಂಡ ಕ್ರಮಗಳು ಹಾಗೂ ಹಮ್ಮಿಕೊಂಡ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

**ರೇಬಿಸ್ ನಿಯಂತ್ರಣ ಕೋಶದ ಸಭೆ:** ಜಿಲ್ಲೆಯಲ್ಲಿ ನಾಯಿ ಕಡಿತದಿಂದ ತೊಂದರೆಗೊಳಗಾದವರಿಗೆ ನಗರ ಪ್ರದೇಶ ಹಾಗೂ ಗ್ರಾಮ ಮಟ್ಟದಲ್ಲಿ ನಿಗದಿಪಡಿಸಿದ ಪರಿಹಾರ ಮೊತ್ತವನ್ನು ಚಿಕಿತ್ಸೆಗಾಗಿ ನೀಡಬೇಕು. ಒಂದು ವೇಳೆ ನಾಯಿ ಕಡಿತ ಮಾನವ ಸಾವು ಸಂಭವಿಸಿದರೆ ರೂ.5 ಲಕ್ಷಗಳ ಪರಿಹಾರವನ್ನು ಕುಟುಂಬದವರಿಗೆ ನೀಡಬೇಕು. ಈ ಬಗ್ಗೆ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಕ್ತ ನಿರ್ದೇಶನ ನೀಡಿ ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಲಕಾರಿ ರಾಮಪ್ಪ ಒಡೆಯರ್, ಹೆಚ್ಚುವರಿ ಎಸ್‌ಪಿ ಹೇಮಂತ್‌ಕುಮಾರ್ ಎನ್., ಆರ್‌ಸಿಎಚ್ ಅಧಿಕಾರಿ ಡಾ.ಪ್ರಕಾಶ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ರವೀಂದ್ರನಾಥ ಎಂ.ಎಚ್., ಸೇರಿದಂತೆ ಎಲ್ಲ ತಾಲ್ಲೂಕಾ ವೈದ್ಯಾಧಿಕಾರಿಗಳು, ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ತುಂಬಾಕು ಉತ್ಪಾದನೆಯಲ್ಲಿ ವಿಶ್ವದಲ್ಲಿ ಭಾರತ 2ನೇ ಸ್ಥಾನ: ಡಾ. ದಡ್ಡಿ



**ಜಮಖಂಡಿ :** ತುಂಬಾಕು ಉತ್ಪಾದನೆಯಲ್ಲಿ ವಿಶ್ವದಲ್ಲಿ ಭಾರತದೇಶ 2ನೇ ಸ್ಥಾನದಲ್ಲಿದೆ. ತಂಬಾಕು ಸೇವನೆಯಿಂದ ಪ್ರತಿವರ್ಷ 4 ಸಾವಿರ ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಮಕ್ಕಳು ಮತ್ತು ಯುವಕರು ಹೆಚ್ಚಿನ ಪ್ರಮಾಣದಲ್ಲಿ ವ್ಯಸನಗಳಿಗೆ ಅಂಟಿಕೊಳ್ಳುತ್ತಿದ್ದಾರೆಂದು ಭಾರತೀಯ ವೈದ್ಯಕೀಯ ಸಂಸ್ಥೆ ತಾಲೂಕಾಧ್ಯಕ್ಷ ನಾಡೋಜ ಡಾ.ಎಚ್.ಜಿ. ದಡ್ಡಿ ಹೇಳಿದರು.

ನಗರದ ಹಂಚಿನಾಳ-ಗಲಗಲಿ ಪುನರವಸತಿ ಕೇಂದ್ರದ ಬಳಿವಿರುವ ತಾಲೂಕಾ ಉಪ ಕಾರಾಗೃಹ ಆವರಣದಲ್ಲಿ ಕಾರಾಗೃಹ ಮತ್ತು ಸುಧಾರಣಾ ಸೇವೆ, ಲಯನ್ಸ್ ಸಂಸ್ಥೆ, ಭಾರತೀಯ ವೈದ್ಯಕೀಯ ಸಂಸ್ಥೆ, ಆರೋಗ್ಯ ಇಲಾಖೆ ಆಶ್ರಯದಲ್ಲಿ ಕಾರಾಗೃಹ ಬಂದಿಗಳಿಗೆ ಹಮ್ಮಿಕೊಂಡಿದ್ದ ತಂಬಾಕು ಮತ್ತು ವ್ಯಸನ ಮುಕ್ತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವೈಜ್ಞಾನಿಕವಾಗಿ ಸಾಕಷ್ಟು ಬದಲಾವಣೆಗೊಂಡಿದೆ. ನಾವೆಲ್ಲರೂ ಬದಲಾವಣೆಗೆ ತಕ್ಕಂತೆ ನಾವು ಹೊಂದಿಕೊಳ್ಳುತ್ತಿಲ್ಲ. ಪರಿವರ್ತನೆ ಆಗುತ್ತಿದೆ ನಾವು ವಿನಾಶದ ಹಾದಿಯಲ್ಲಿ ಸಾಗುತ್ತಿದ್ದೇವೆ. ಜೀವನಶೈಲಿ ಬದಲಾದಂತೆ ಹೊಸ ವಸನ ಗಳಿಗೆ ಆಕರ್ಷಿತರಾಗುತ್ತಿದ್ದೇವೆ. ಹಿಂದಿನ ಸಮಸ್ಯೆಗಳ ಸಹಿತ ಹೊಸ ಸಮಸ್ಯೆಗಳನ್ನು ಎದುರಿಸುವ ಮೂಲಕ ನಮ್ಮ ಜೀವನ ನರಕವಾಗುತ್ತಿದೆ. ದೇಹ ಮತ್ತು ಮಾನಸಿಕ ಆರೋಗ್ಯ ಕೂಡ ಉತ್ತಮವಾಗಿರಬೇಕು ಎಂದರು.

ಇಲಕಲ್‌ದ ಮಹಾಂತ ಶ್ರೀಗಳು ಕಳೆದ 40 ವರ್ಷಗಳಿಂದ ವಸನಮುಕ್ತ ಸಮಾಜ ನಿರ್ಮಾಣಕ್ಕೆ ಹೋರಾಟ ಮಾಡಿದ್ದಾರೆ. ರಾಜ್ಯ ಸರಕಾರ ಅವರ ಹೆಸರಿನಲ್ಲಿ ವಸನ ಮುಕ್ತ ದಿನಾಚರಣೆ ಆಚರಿಸುತ್ತಿದೆ. ವಿಶ್ವದಲ್ಲಿ ಶೇ. 6ರಷ್ಟು ವ್ಯಸನಿಗಳಿದ್ದು ಅದರಲ್ಲಿ ಯುವತಿಯರ ಸಂಖ್ಯೆ ಹೆಚ್ಚಾಗಿದ್ದು ಆತಂಕದ ಸಂಗತಿ. ವಸನಗಳಿಂದ ಮಾನಸಿಕ ಹಿಡಿತ ತಪ್ಪಲಿದೆ. ಸರಕಾರ ಗುಟಕಾ, ತುಂಬಾಕು, ಸಾರಾಯಿ, ಮಾವಾದಂತಹ ವಿಷಕಾರಿ ಪದಾರ್ಥಗಳನ್ನು ಸಂಪೂರ್ಣ ನಿಷೇಧ ಮಾಡಿದರೇ ಮಾತ್ರ ಉತ್ತಮ ಆರೋಗ್ಯ ವಾತಾವರಣ ನಿರ್ಮಾಣವಾಗಲಿದೆ ಎಂದರು.

ತಾಲೂಕ ಉಪಕಾರಾಗೃಹ ಅಧೀಕ್ಷಕ ಅಶೋಕ ಹೊಸಮನಿ ಅಧ್ಯಕ್ಷತೆ ವಹಿಸಿ ಮಾತನಾಡಿ, ವಸನಗಳು ಸಮಾಜದ ಮೇಲೆ ಪರಿಣಾಮ ಬೀರಲಿವೆ. ವಸನದ ಭರದಲ್ಲಿ ಅಪರಾಧ ಕೃತ್ಯಗಳು ನಡೆದಲ್ಲಿ ಮಕ್ಕಳು, ಕುಟುಂಬದ ಸದಸ್ಯರು ಬೀದಿಗೆ ಬರಲಿದ್ದಾರೆ. ವಸನಗಳಿಗೆ ದಾಸರಾಗಿ ತಮ್ಮ ಅಮೂಲ್ಯ ಜೀವನ ಹಾಳು ಮಾಡಿಕೊಳ್ಳಬಾರದು. ಹಕ್ಕು ಪ್ರತಿಪಾದಿಸುವ ನಾವು ನಮ್ಮ ಕರ್ತವ್ಯಗಳನ್ನು ಸಮರ್ಪಕವಾಗಿ ನಿಭಾಯಿಸಬೇಕು. ಕರ್ತವ್ಯಗಳನ್ನು ನಿಭಾಯಿಸುವಲ್ಲಿ ವಿಫಲರಾದರೇ ಅಪರಾಧಗಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ಎಂದರು.

ಆರೋಗ್ಯಇಲಾಖೆ ವೈದ್ಯಾಧಿಕಾರಿ ಡಾ.ಮುಕುಂದ ಕಾಂಬಳೆ ಮಾತನಾಡಿದರು. ವೇದಿಕೆಯಲ್ಲಿ ಲಯನ್ಸಸಂಸ್ಥೆ ಅಧ್ಯಕ್ಷ ಸಂಗಮೇಶ ಕೌಜಲಗಿ, ಮಾನಸಿಕ ಆರೋಗ್ಯ ಕಾರ್ಯಕರ್ತೆ ಮಹಾಲಕ್ಷ್ಮೀ ಕೊಲಕಾರ, ಶಿವಲಿಂಗ ಬಾಗಲಕೋಟ, ಅಭಿಯಂತರಾದ ವಿಜಯ ಕಟಗಿ, ನ್ಯಾಯವಾದಿ ಪ್ರವೀಣ ಮೈಗೂರ, ಚಿನ್ಮಯ ಜಿರಲಿ ಸಹಾಯಕ ಕಾರಾಗೃಹ ಅಧಿಕಾರಿಗಳಾದ ಬಿ.ಪಿ.ಹಿರೇಮಠ, ಎ.ವೈ.ಸುನಗದ ಸಹಿತ ಹಲವರು ಇದ್ದರು.

ಕಾರಾಗೃಹ ವಿಕ್ಷಕಿ ಬಿ.ಎ.ಬಿರಾದಾರ ಪ್ರಾರ್ಥಿಸಿದರು. ಕಾರಾಗೃಹ ಅಧಿಕಾರಿಗಳಾದ ಬಿ.ಪಿ.ಹಿರೇಮಠ ಸ್ವಾಗತಿಸಿದರು. ಆರ್.ಎ.ಬಿರಾದಾರ ನಿರೂಪಿಸಿದರು. ಬಿ.ಎಸ್.ಕರಿಗಾರ ವಂದಿಸಿದರು.

# ಜಿಂಕೆ ಹಾವಳಿಯಿಂದ ಸಾಲು ಸಾಲಾಗಿ ಹೆಸರು ಬೆಳೆ ನಾಶ

**ಕೊಪ್ಪಳ :** ಜಿಲ್ಲೆ ಕುಕನೂರು ತಾಲೂಕಿನ ಯರೇಹಂಚಿನಾಳ ಗ್ರಾಮದ ರೈತರ ಜಮೀನಿಗೆ ನುಗ್ಗಿ ಹೆಸರು ಬೆಳೆಯನ್ನು ಹಾನಿ ಮಾಡುತ್ತದೆ.

ಜಿಂಕೆಗಳು ರೈತಾಪಿ ಜನರ ಸುಳಿವು ಇಲ್ಲದ ಸಮಯ ನೋಡಿ 70.ರಿಂದ.80.ಕ್ಕೂ ಹೆಚ್ಚು ಜಿಂಕೆಗಳು ತಂಡೊಪ ತಂಡವಾಗಿ ರೈತರ ಜಮೀನಿಗೆ ನುಗ್ಗಿ ಸಣ್ಣ ಹೆಸರು ಬೆಳೆಯನ್ನು ಜಿಂಕೆ ಸಾಲು ಹಿಡಿದು ತಿಂದು ನಾಶ ಮಾಡಿದೆ ಇದರಿಂದ ರೈತರು ಬೇಸತ್ತು ಪುನಃ ಸಾಲ ಸೂಲ ಮಾಡಿ ಹೆಸರು ಬಿತ್ತನೆ ಮಾಡಬೇಕು ಅಂದ್ರು ಸಹ ರೈತ ಸಂಪರ್ಕ ಕೇಂದ್ರದಲ್ಲಿ ಬಿತ್ತನೆ ಬೀಜ ಸಹ ಕೊಡುವುದಿಲ್ಲ ಇದಕ್ಕೆ ಕಾರಣ ರೈತ ಸಂಪರ್ಕ ಕೇಂದ್ರದಲ್ಲಿ ಒಂದು ಸಲ ಆಧಾರ್ ಕಾರ್ಡ್ ಇಂಟ್ರಿ ಮಾಡಿ ರೈತರಿಗೆ ಬೀಜ ಕೊಟ್ಟ ಮೇಲೆ ಎರಡನೇ ಸಲ ಬಿತ್ತನೆ ಬೀಜಕ್ಕಾಗಿ ರೈತರು ಖರೀದಿಸಲು ರೈತ ಸಂಪರ್ಕ ಕೇಂದ್ರಕ್ಕೆ ಹೋದರೆ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ನಿಮ್ಮ ಆಧಾರ್ ಕಾರ್ಡ್ ಆನ್ಲೈನ್ ನಲ್ಲಿ ಇಂಟ್ರಿ ಆಗಿದೆ ನಿಮಗೆ ಬಿತ್ತನೆ ಬೀಜ ಬರುವುದಿಲ್ಲ ಎಂದು ರೈತರಿಗೆ ಹೇಳಿ ಕಳಿಸುತ್ತಾರೆ.ರೈತರ ಕಷ್ಟ ತಪ್ಪಿಸಬೇಕೆಂದರೆ.ಕೊಪ್ಪಳ ಜಿಲ್ಲೆಯ ಜಂಟಿ ನಿರ್ದೇಶಕ ಅಧಿಕಾರಿಗಳು ಪುನಃ ಬಿತ್ತನೆ ಮಾಡುವಂತ ರೈತರಿಗೆ ಬಿತ್ತನೆ ಬೀಜ ಕೊಡುವಂತೆ ಮಾಡಬೇಕು

ಈ ವೇಳೆಯಲ್ಲಿ ರೈತರು ಒಂದು ಸಲ ಬಿತ್ತನೆ ಮಾಡಬೇಕಾದರೆ ಸಾಲ ಸೂಲ ಮಾಡಿ ಕಷ್ಟಪಟ್ಟು ಬಿತ್ತನೆ ಮಾಡಿದ್ದಾರೆ ಪುನಃ ರೈತರು ಸಾಲಮಾಡಿ ಬಿತ್ತನೆ ಮಾಡಬೇಕೆಂದರೆ ರೈತರಿಗೆ ಇದು ಕಷ್ಟದ ಮೇಲೆ ಕಷ್ಟವಾಗಿದೆ ಅದಕ್ಕಾಗಿ ಸರ್ಕಾರ ಮುಂಗಾರು ಹಂಗಾಮಿನಲ್ಲಿ ರೈತರು ಬಿತ್ತನೆ ಮಾಡಿದ ಹೆಸರು ಬೆಳೆ ಹಾಳಾದ ಪರಿಹಾರವನ್ನು ರೈತರಿಗೆ ಕೊಡಬೇಕೆಂದು ಗ್ರಾಮದ ರೈತನಾದ ದ್ಯಾಮಣ್ಣ ಶಂಬಣ್ಣ ವಿರಾಪೂರ ಇವರು ಆರೋಪಿಸಿದ್ದಾರೆ.

ಕೂಡಲೇ ಸರ್ಕಾರ ಜಿಂಕೆ ತಡೆಗಟ್ಟಲು ಅರಣ್ಯ ಅಧಿಕಾರಿಗಳಾಗಲಿ ಜನಪ್ರತಿನಿಧಿಗಳಾಗಲಿ ಯಾವ ಜಿಲ್ಲೆಗಳಲ್ಲಿ ಆದರೂ ಒಂದು ಜಿಂಕೆ ಪಾರ್ಕ್ ನಿರ್ಮಾಣ ಮಾಡಿ ಉತ್ತರ ಕರ್ನಾಟಕದ ರೈತರ ಕಷ್ಟಗಳನ್ನು ತಪ್ಪಿಸಬೇಕೆಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಅಂದಪ್ಪ ರುದ್ರಪ್ಪ ಕೋಳೂರ ರವರು ಸರ್ಕಾರಕ್ಕೆ ಆಗ್ರಹಿಸಿದರು.

ಹೌದು ಜಿಂಕೆ ಕಾಟಕ್ಕೆ ಯಲಬುರ್ಗಾ ಹಾಗೂ ಕುಕನೂರು ತಾಲೂಕಿನ ಭಾಗದ ರೈತರು ಹಲುವಾರು ವರ್ಷಗಳಿಂದ ಜಿಂಕೆ ಹಾವಳಿಯಿಂದ ಬೇಸತ್ತು ಪ್ರತಿ ವರ್ಷ ಬಿತ್ತನೆ ಮಾಡಿದ ಜಮೀನಿನಲ್ಲಿ ಬೆಳೆ ಕಳೆದುಕೊಂಡು ಸರ್ಕಾರದಿಂದ ಜಿಂಕೆ ಪರಿಹಾರ ಇಲ್ಲದೇ ರೈತರ ಕೈಯಲ್ಲಿ ಹಣ ಇಲ್ಲದೇ ಜಿಲ್ಲೆಯ ರೈತರು ಕಂಗಾಲಾಗಿದ್ದಾರೆ. ಸರ್ಕಾರದಿಂದ ಯಾವ ರೈತರಿಗೂ ನೈಯ ಪೈಸೆ ಜಿಂಕೆ ಹಾವಳಿ ಪರಿಹಾರ ಕೊಟ್ಟಿರುವುದಿಲ್ಲ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಬರ ಪೀಡಿತ ಪರಿಹಾರ ರಾಜ್ಯಕ್ಕೆ ಬಂದರೂ ಕೂಡ ಒಬ್ಬ ರೈತರಿಗೆ ಪರಿಹಾರ ಬಂದರೆ ಇನ್ನೊಬ್ಬ ರೈತರಿಗೆ ಪರಿಹಾರ ಬಂದಿರುವುದಿಲ್ಲ ಸಮಯಕ್ಕೆ ಸರಿಯಾಗಿ ಯಾವ ರೈತರಿಗೂ ಬರ ಪರಿಹಾರವು ಸಮರ್ಪಕವಾಗಿ ಮುಟ್ಟುವಂತೆ ಆಗಿಲ್ಲ ಈ ಸರ್ಕಾರ ರೈತರನ್ನು ಹೀನಾಯವಾಗಿ ಕಾಣುತ್ತಾರೆ. ಹೀಗಾಗಿ ಜಿಲ್ಲೆಯ ರೈತರು ಸಾಲ ಭಾದೆಯಿಂದ ಆತ್ಮಹತ್ಯೆಗೆ ಶರಣಾಗುತ್ತಾರೆಂದು ರೈತರ ಹಕ್ಕು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಉಪಾಧ್ಯಕ್ಷರಾದ ಅಂದಪ್ಪ ರುದ್ರಪ್ಪ ಕೋಳೂರ ಇವರು ಸರ್ಕಾರಕ್ಕೆ ಆಗ್ರಹಿಸಿದರು

ಈ ಸಂದರ್ಭದಲ್ಲಿ ರೈತ ಸಂಘದ ಕಾರ್ಯಾಧ್ಯಕ್ಷರಾದ ನಾಗರಾಜ ಗೋನಲ. ರೈತ ಸಂಘದ ಕೊಪ್ಪಳ ಜಿಲ್ಲಾಧ್ಯಕ್ಷ ಬಸವರಾಜ ಹೂಗಾರ. ರೈತ ಸಂಘದ ಗದಗ ಜಿಲ್ಲಾಧ್ಯಕ್ಷ ಯಲ್ಲಪ್ಪ ಎಚ್ ಬಾಬರಿ.ಅಣ್ಣಪ್ಪ ನರೇಗಲ್. ಮಾರುತಿ ಮರಡಿ.ಶರಣಪ್ಪ ಹಿರೇಹೋಳಿ. ಗುದ್ನಪ್ಪ ಪೂನ್ನೆದ.ಹೊನ್ನಪ್ಪ ಮರಡಿ. ರವಿ ಹೊಸಮನಿ.ಬಸವರಾಜ ಅಳವುಂಡಿ ಇತರರು ಆರೋಪಿಸಿದರು.

# ಪರಿಸರ ಜಾಗೃತಿ ಅವಶ್ಯ: ಧ್ರುವ ಜತ್ತಿ



**ರಬಕವಿ-ಬನಹಟ್ಟಿ :** ದೇಶದಲ್ಲಿ ಹಸಿವು ನಿರ್ಮೂಲನೆ, ಆಹಾರ ಸುರಕ್ಷತೆ, ಲಿಂಗ ಸಮಾನತೆ, ಮತ್ತು ಸುಭದ್ರ ಇನ್ಫ್ರಾಸ್ಟ್ರಕ್ಚರ್ ನಿರ್ಮಾಣ, ಜಾಗತಿಕ ಕೈಗಾರೀಕರಣಕ್ಕೆ ಉತ್ತೇಜನ ನೀಡುವದು ಮೊದಲಾದ ಗುರಿಯಿಂದ ಸುಸ್ಥಿರ ಅಭಿವೃದ್ಧಿ ಗುರಿ ಸಾಧ್ಯವಾಗಿದೆ ಎಂದು ಬಿ. ಡಿ. ಜತ್ತಿ ಫೌಂಡೇಶನ್ ಅಧ್ಯಕ್ಷ ಧ್ರುವ ಜತ್ತಿ ಹೇಳಿದರು.

ರಬಕವಿ-ಬನಹಟ್ಟಿ ಸರ್ಕಾರಿ ಪದವಿ ಕಾಲೇಜಿನ ಆವರಣದಲ್ಲಿ ಒಂದು ದಿನದ ಅಂತರಾಷ್ಟ್ರೀಯ ಕಾರ್ಯಾಗಾರದಲ್ಲಿ ಹಮ್ಮಿಕೊಂಡ ಸುಸ್ಥಿತ ಅಭಿವೃದ್ಧಿಯ ಗುರಿಗಳು ಹಾಗು ಪರಿಸರ ಎಂಬ ವಿಷಯದ ಕುರಿತು ಮಾತನಾಡಿದ ಅವರು, ಜಗತ್ತಿನ ಹಲವಾರು ದೇಶಗಳು ಉನ್ನತಿ ಹೊಂದಿ ಸುಸ್ಥಿರ ರಾಷ್ಟ್ರಗಳಾಗಿ ನಿರ್ಮಾಣ ಹೊಂದುತ್ತಿವೆ. ಅದರಂತೆ ಭಾರತವೂ ಮುಂಚೂಣಿ ರಾಷ್ಟ್ರವಾಗಿ ಬೆಳೆಯಬೇಕಾದರೆ ಇವೆಲ್ಲದರ ಅಭಿವೃದ್ಧಿಯಿಂದ ಸಾಧ್ಯವೆಂದರು.

ನಮ್ಮ ಸುತ್ತಲಿನ ತಾಪಮಾನ ಹೆಚ್ಚಾಗುವುದರ ಬಗ್ಗೆ ಹಾಗು ನಮ್ಮ ದೇಶದ ಹಿಂದಿನ ಐದು ವರ್ಷಗಳಲ್ಲಿ ಆರು ಲಕ್ಷ ಹೆಕ್ಟರ್ ಅರಣ್ಯ ಪ್ರದೇಶ ಕುಗ್ಗಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿದ ಧ್ರುವ, ಗಿಡ ನೆಡುವ ಹಾಗು ಅರಣ್ಯ ಉಳಿಸುವ ಕಾರ್ಯ ಮಹತ್ವದ್ದಾಗಿದೆ ಎಂದರು.

ಪ್ರಾಚಾರ್ಯ ಡಾ. ಚೇತನ್ ಡಾಗಾ ಮಾತನಾಡಿ, ಪರಿಸರ ಸಂರಕ್ಷಣೆ ಮತ್ತು ಅರಣ್ಯ ಸಂರಕ್ಷಣೆಯಲ್ಲಿ ಸರ್ಕಾರದ ಎಷ್ಟು ಪಾತ್ರವಿದೆಯೋ ಅಷ್ಟೇ ಜವಾಬ್ದಾರಿ ಪ್ರತಿ ನಾಗರಿಕನ ಕರ್ತವ್ಯವೆಂದು ನೆರೆದಿದ್ದ ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು. ಕಾರ್ಯಾಗಾರದಲ್ಲಿ ಫ್ರಾನ್ಸದಿಂದ ಬಂದಿದ್ದ ಮೂವರು ವಿದ್ಯಾರ್ಥಿಗಳು ಈ ವಿಷಯಗಳ ಕುರಿತು ಮಾತನಾಡಿದರು. ಮಹಾಂತೇಶ ರಡರಟ್ಟಿ, ವಿಜಯ ಕಾಬ್ರಾ, ಚೇತನ ಚೋಪಡೆ, ರಾಜು ಬೀಳಗಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಮಸೂತಿ ಗ್ರಾಮದ ವ್ಯಕ್ತಿಯ ಕೊಲೆ: ಆಲಮಟ್ಟಿ ಹಿನ್ನೀರಿನಲ್ಲಿ ಶವ ಹುಡುಕಾಟ

ವರದಿ: ಲಾಲಸಾಬ ಸವಾರಗೋಳ

**ಆಲಮಟ್ಟಿ :** ಕೊಲ್ಹಾರ ತಾಲ್ಲೂಕಿನ ಮಸೂತಿ ಗ್ರಾಮದ ವ್ಯಕ್ತಿಯೊಬ್ಬನನ್ನು ಅನೈತಿಕ ಸಂಬಂಧ ಹಿನ್ನೆಲೆಯಲ್ಲಿ ಕೊಲೆಗೈದು ಇಲ್ಲಿಯ ಪಾರ್ವತಿ ಕಟ್ಟಾ ಸೇತುವೆ (ಬೇನಾಳ ಬ್ರಿಜ್) ಮೇಲಿಂದ ಕೃಷ್ಣಾ ನದಿಗೆ ಎಸೆದ ಘಟನೆ ಈಚೆಗೆ ನಡೆದಿದೆ.

ಮೃತ ವ್ಯಕ್ತಿ ವಿಜಯಪುರ ತಾಲ್ಲೂಕಿನ ಜುಮನಾಳ ಗ್ರಾಮದ ಮಸೂತಿ ಗ್ರಾಮದ ರಮೇಶ ತಾಯಿ ಮಾಯವ್ವ ಮಾದರ (23). ಅನೈತಿಕ ಸಂಬಂಧ ಹಿನ್ನೆಲೆಯಲ್ಲಿ ಆಕ್ರೋಶಗೊಂಡು ಮಸೂತಿ ಗ್ರಾಮದ ಆರೋಪಿಗಳಾದ ಮಂಜುನಾಥ ಬಾಬು ಮಾದರ, ಭೀಮಪ್ಪ ತಾಯಿ ದಾಳವ್ವ ಮಾದರ, ಸಾರೆಪ್ಪ ಹಣಮಂತ ಮಾದರ, ಮುತ್ತು ನಡುವಿನಮನಿ ಸೇರಿ ಕಾರಿನಲ್ಲಿ ಸದರಿ ವ್ಯಕ್ತಿಯನ್ನು ಕರೆದುಕೊಂಡು ಹೋಗಿ ಬೇನಾಳ ಬ್ರಿಜ್ ಬಳಿ ಹೊಡೆದು, ಈಜು ಬಾರದ ಆತನನ್ನು ಮೂವರು ಸೇರಿ ಸೇತುವೆ ಮೇಲಿಂದ ಕೃಷ್ಣಾ ನದಿಗೆ ಎಸೆದಿದ್ದಾರೆ ಎಂದು ಪಿಎಸ್ಐ ಕೆ.ಎನ್. ಯತೀಶ ತಿಳಿಸಿದ್ದಾರೆ. ನಾಲ್ವರನ್ನು ಬಂಧಿಸಲಾಗಿದೆ.

2023 ರ ಡಿಸೆಂಬರ್ 31 ರಂದು ಘಟನೆ ನಡೆದಿದ್ದು , 2024 ರ ಮಾಚ9 19 ರಂದು ಕಾಣೆಯಾದ ದೂರಿನ ಹಿನ್ನೆಲೆಯಲ್ಲಿ ತನಿಖೆ ನಡೆಸಿದಾಗ ಕೊಲೆಯ ರಹಸ್ಯ ಬಯಲಾಗಿದೆ.

**ಶವ ಹುಡುಕಾಟ :**

ಶವವನ್ನು ಆಲಮಟ್ಟಿ ಬಳಿಯ ಪಾರ್ವತಿಕಟ್ಟಾ ಸೇತುವೆ ಬಳಿ ಎಸೆದಿದ್ದಾಗಿ ತನಿಖೆಯ ವೇಳೆ ಆರೋಪಿಗಳು ಹೇಳಿದ್ದರಿಂದ, ಕೃಷ್ಣಾ ನದಿ ಹಿನ್ನೀರಿನಲ್ಲಿ ಎರಡು ದಿನಗಳ ಕಾಲ ಕೂಡಗಿ ಪೊಲೀಸರು ಸ್ಥಳೀಯ ಮೀನುಗಾರರು ಹಾಗೂ ಪೊಲೀಸರ ನೆರವಿನೊಂದಿಗೆ ಶವ ಹುಡುಕಾಟ ನಡೆಸಿದರು.

ಶವ ಮಾತ್ರ ಇನ್ನೂವರೆಗೂ ಪತ್ತೆಯಾಗಿಲ್ಲ, ಕೂಡಗಿ ಪಿಎಸ್ಐ ಕೆ. ಎನ್. ಯತೀಶ, ನಿಡಗುಂದಿ ಸಿಪಿಐ ಶರಣಗೌಡ ಗೌಡರ ನೇತೃತ್ವದಲ್ಲಿ ತನಿಖೆ ನಡೆದಿದೆ.

## ಬಿ.ವಿ.ವಿ. ಸಂಘದ ಅಕ್ಕಮಹಾದೇವಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇಂಪ್ಯಾಕ್ಟ ಉಪನ್ಯಾಸ ಕಾರ್ಯಕ್ರಮ

# ಅಧ್ಯಯನದಲ್ಲಿ ಸೃಜನಾತ್ಮಕತೆ, ಕ್ರೀಯಾಶೀಲತೆ ಹೊಸ ಆಲೋಚನೆಗೆ ಏಕಾಗ್ರತೆ ಅಗತ್ಯ: ನಾಗಾರ್ಜುನ

**ಬಾಗಲಕೋಟೆ :** ಅಧ್ಯಯನದಲ್ಲಿ ಕ್ರಿಯಾಶೀಲರಾಗಿ ಸೃಜನಾತ್ಮಕತೆಯಿಂದ ಹೊಸ ಆಲೋಚನೆಗಳಿಂದ ತಮ್ಮ ನಿರ್ದಿಷ್ಟ ಗುರಿಯನ್ನು ಮುಟ್ಟಲು ಏಕಾಗ್ರತೆ, ಸತತ ಪ್ರಯತ್ನ ಅಗತ್ಯ ಎಂದು ಕೊಯಮತ್ತೂರಿನ ಪ್ರೊಮಿನೆನ್ಸ ಹೋಮ್ ವರ್ಕ್ಸ್‌ನ ಪೆಟೆಂಟ್ ಅನಾಲೆಸ್ಟ ಎಮ್.ಜಿ.ನಾಗಾರ್ಜುನ ಹೇಳಿದರು.

ಅವರು ನಗರದ ಬಿ.ವಿ.ವಿ ಸಂಘದ ಅಕ್ಕಮಹಾದೇವಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇನ್ಸಿಟ್ಯೂಷನ್ಸ್ ಇನ್ನೋವೇಶನ್ ಕೌನ್ಸಿಲ್ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಇಂಪ್ಯಾಕ್ಟ ಉಪನ್ಯಾಸ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವುದರ ಮೂಲಕ ಉಧ್ಘಾಟಿಸಿ ಮಾತನಾಡಿದರು.



ಸೃಜನಾತ್ಮಕತೆ, ಕ್ರೀಯಾಶೀಲತೆ ಹೊಸ ಆಲೋಚನೆ, ಸತತ ಪ್ರಯತ್ನ, ಸಮಯ ಪ್ರಜ್ಞೆ, ತಾಳ್ಮೆಯಿಂದ ಕಾರ್ಯ ಪ್ರವೃತ್ತರಾದರೆ ತಮ್ಮ ನಿರ್ದಿಷ್ಟ ಗುರಿ ತಲುಪಲು ಸಾಧ್ಯ. ಗುರಿ ಸಾಧನೆಗೆ ಪ್ರಯತ್ನಿಸಿದರೆ ತಾವು ಕಂಡ ಕನಸನ್ನು ನನಸಾಗಿಸಿಕೊಳ್ಳಲು ಸಾಧ್ಯ ಎಂದರು.

ಇನ್ನೂರ್ವ ಅತಿಥಿ ಉಪನ್ಯಾಸಕರಾಸ ಬೆಂಗಳೂರಿನ ಸೆವೆನ್ ನೊವೆಲಿಟಿ ಫೌಂಡರ್ ಆದ ಜ್ಯೋತಿ ಸಜ್ಜನ ಮಾತನಾಡಿ ನಿಮ್ಮ ಉತ್ತಮವಾದ ಒಂದು ಆಲೋಚನೆ ನಿಮ್ಮ ಬದುಕನ್ನು ಬದಲಾಯಿಸುವುದಲ್ಲದೇ ಇಡೀ ಜಗತ್ತನ್ನು ಬದಲಾಯಿಸಬಹುದು. ಕ್ರೀಯಾಶೀಲರಾದಾಗ ಹೊಸ ಹೊಸ ವಿಚಾರಗಳು ರೂಪಗೊಂಡು ಅತ್ಯುತ್ತಮ ಉತ್ಪನ್ನಗಳನ್ನು ಹೊರತರುವುದಲ್ಲದೇ ಯಶಸ್ಸನ್ನು ತಂದು ಕೊಡುತ್ತದೆ. ಪ್ರತಿಯೊಬ್ಬರು ಸಮಾಜಕ್ಕೆ ಹೊಸದೊಂದನ್ನು ಕಾಣಿಕೆಯಾಗಿ ನೀಡಬೇಕು. ಬೌದ್ಧಿಕ ಬಂಡವಾಳ ಹೂಡಿಕೆಯ ಅವಕಾಶಗಳು ಬಹುಮುಖ್ಯವಾಗಿವೆ ಎಂದರು.

ಪ್ರಾಚಾರ್ಯರಾದ ಶ್ರೀಮತಿ ಎಸ್. ಜೆ. ಒಡೆಯರ ಅವರು ಮಾತನಾಡಿ ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಹೊಸತನವನ್ನು ರೂಡಿಸಿಕೊಳ್ಳಬೇಕು. ಆ ನಿಟ್ಟಿನಲ್ಲಿ ಎಲ್ಲರೂ ಕ್ರಿಯಾಶೀಲರಾಗಬೇಕು. ಐಐಸಿ ಉಪಾಧ್ಯಕ್ಷರಾದ ಡಾ. ಜಿ. ಆಯ್. ನಂದಿಕೋಲಮಠ, ಐಐಸಿ ಘಟಕದ ಸಂಯೋಜಕಿಯಾದ ಕು. ಸೀಮಾ ಚಾವುಸ್, ಎಲ್ಲ ಉಪನ್ಯಾಸಕ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಆಯಕ್ಯೂಎಸಿ ಸಂಯೋಜಕಿಯರಾದ ಶ್ರೀಮತಿ ಪಿ.ಕೆ.ಚೌಗೂಲಾ ಪರಿಚಯಿಸಿದರು, ಬಿ.ಕಾಂ. ವಿದ್ಯಾರ್ಥಿನಿ ಕು.ಅಕ್ಷತಾ ಗೊಂಧಾಳೆ ಪ್ರಾರ್ಥಿಸಿದರು.

# ಭೂಮಿ ಸಕಲ ಜೀವಿಗಳಿಗೆ ಆಶ್ರಯ ನೀಡುವ ತಾಣ: ಶ್ರೀಯುತ ಮಿಟ್ಟೆಸಾಬ ಮುಲ್ಲಾ

**ಸಿಂದಗಿ :** ತಾಲ್ಲೂಕಿನ ಸಂಗಮ ಸಂಸ್ಥೆಯ ಆವರಣದಲ್ಲಿ ಇಂದು ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಪ್ರತಿ ವರ್ಷ ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆ ಆಚರಿಸುತ್ತೇವೆ. ಅದರೆ ಪ್ರತಿ ವರ್ಷ ಬಿಸಲಿನ ತಾಪಮಾನ ಹಾಗೂ ಹವಾಮಾನ ಬದಲಾವಣೆಯಲ್ಲಿ ವೈಪಲ್ಯಗಳು ಕಾಣುತ್ತಿದ್ದೇವೆ. ಆದರಿಂದ ಪ್ರತಿಯೊಬ್ಬರು ಸಸಿಗಳನ್ನು ಹಚ್ಚುವುದರ ಮೂಲಕ ಉತ್ತಮವಾದ ಪರಿಸರ ನಿರ್ಮಾಣ ಮಾಡುವುದರ ಜೊತೆಗೆ ಒಳ್ಳೆಯ ಆರೋಗ್ಯ ಕಾಪಾಡಿಕೊಳ್ಳಬಹುದು. ನಾವೆಲ್ಲರೂ ಸಾದ್ಯವಾದಷ್ಟು ಸಸಿಗಳು ನೆಟ್ಟು ಸಂರಕ್ಷಣೆ ಮಾಡಬೇಕು. ಪರಿಸರ ಉಳಿವಿಗಾಗಿ ನಮ್ಮ ಮನೆಯಲ್ಲಿ ಮಗು ಜನಿಸಿದಾಗ, ಹುಟ್ಟು ಹಬ್ಬದ ಆಚರಿಸುವಾಗ, ವಾಹನಗಳು ಖರೀದಿ ಮಾಡಿದಾಗ ಹೀಗೆ ಹಲವಾರು ಕಾರ್ಯಗಳನ್ನು ನಾವು ಕೈಗೊಳ್ಳುವಾಗ ಗಿಡಗಳನ್ನು ನೆಡಬೇಕು. ನಮ್ಮ ಹಿರಿಯರು ಬೆಳಿಸಿದ ಮರಗಳಿಂದ ಹಾಗೂ ದಟ್ಟವಾದ ಅರಣ್ಯಗಳಿಂದ ನಮ್ಮಗೆ ಮಳೆ, ಉಸಿರಾಡಲು ಸ್ವಚ್ಚವಾದ ಗಾಳಿ ಸಿಗುತ್ತದೆ ಎಂದು ಸಂಗಮ ಸಂಸ್ಥೆಯ ನಿರ್ದೇಶಕರಾದ ಪಾ॥ ಸಂತೋಷ ಕಾರ್ಯಕ್ರಮದ ಅಧ್ಯಕ್ಷ ಸ್ಥಾನವಹಿಸಿ ಮಾತನಾಡಿದರು.



ನಮ್ಮ ಮಕ್ಕಳಿಗೆ ಸಂಪತ್ತು ಆಸ್ತಿ ಗಳಿಸುವುದಕ್ಕಿಂತ ಉತ್ತಮವಾದ ಆರೋಗ್ಯ ಕಾಪಾಡಿಕೊಳ್ಳಲು ಸಸಿಗಳು ನೆಟ್ಟು ಉತ್ತಮವಾದ ಪರಿಸರ ನಿರ್ಮಾಣ ಮಾಡಿ ಕೊಟ್ಟರೆ ಅದೇ ನಾವು ಉಡುಗೊರೆ ಕೊಟ್ಟ ಹಾಗೆ. ನಮ್ಮ ಅರಣ್ಯ ಇಲಾಖೆಯಲ್ಲಿ ಕಡಿಮೆ ಬೆಲೆಗೆ ಸಸಿಗಳು ಕೊಡುತ್ತೇವೆ ಪ್ರತಿಯೊಬ್ಬರು ಗಿಡಗಳನ್ನು ನೆಟ್ಟು, ಸಂರಕ್ಷಿಸಿ, ಬೆಳಿಸಿ ಉತ್ತಮವಾದ ಪರಿಸರ ನಿರ್ಮಾಣ ಮಾಡಬೇಕೆಂದು ಸಿಂದಗಿ ಅರಣ್ಯ ವಲಯ ಅಧಿಕಾರಿಗಳಾದ ಶ್ರೀಯುತ ಮಿಟ್ಟೆಸಾಬ ಮುಲ್ಲಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು

2024 ರ ವಿಶ್ವ ಪರಿಸರ ದಿನಾಚರಣೆಯ ದ್ಯೇಯವಾಕ್ಯ "ಭೂವಿ ಮರುಸ್ಥಾಪನೆ, ಮರುಭೂಮೀಕರಣ ಮತ್ತು ಬರ ಸ್ಥಿತಿಸ್ಥಾಪಕತ್ವ" ಆಗಿದೆ. ಭೂಮಿ ಸಕಲ ಜೀವಿಗಳಿಗೆ ಆಶ್ರಯ ನೀಡುವ ತಾಣ. ಭೂಮಿ ತಾಯಿಯು ನಮ್ಮ ಬದುಕಿಗೆ ಅವಶ್ಯವಿರುವ ಎಲ್ಲವನ್ನು ನೀಡುತ್ತಾಳೆ ಆದರೆ ಮಾನವ ಮಾತ್ರ ಪ್ರಕೃತಿಯ ವಿಚಾರದಲ್ಲಿ ನಿರ್ಲಕ್ಷ ಮಾಡುತ್ತಿದ್ದಾರೆ. ನಾವು ನೈಸರ್ಗಿಕ ಸಂಪನ್ಮೂಲಗಳನ್ನು ಹಾಳು ಮಾಡುತ್ತಿದ್ದೇವೆ. ಗಿಡಮರಗಳು ಕಡಿದು ತಾಪಮಾನ ಹೆಚ್ಚಿಸಲು ಕಾರಣರಾಗಿದ್ದೇವೆ ಎಂದು ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಸಿ॥ ಸಿಂತಿಯಾ ಡಿ'ಮೆಲ್ಲೊ ಪ್ರಾಸ್ತವಿಕವಾಗಿ ಮಾತನಾಡಿದರು.

ಪರಿಸರ ಕೋಪಗೊಂಡರೆ ನಾವೆಲ್ಲರೂ ನಾಶವಾಗುತ್ತೇವೆ. ಪ್ರಕೃತಿ ಉಳಿವಿಗಾಗಿ ನಾವೆಲ್ಲರೂ ಸಸಿಗಳ ಹಚ್ಚುವ ಸಂಕಲ್ಪ ಮಾಡೋಣ ಎಂದು ಮಹಿಳಾ ಸಂಘಗಳ ಮೇಲ್ವಿಚಾರಕರಾದ ಲಕ್ಷ್ಮೀ ಪೋಲಿಸ ಪಾಟೀಲರವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಕಂಪ್ಯೂಟರ್ ಹಾಗೂ ಹೊಲಿಗೆ ತರಬೇತಿ ಪಡೆದ ಯುವತಿಯರಿಗೆ ತರಬೇತಿಯ ಪ್ರಮಾಣಪತ್ರ ವಿತರಣೆ ಮಾಡಲಾಯಿತು. ಎಸ್.ಎಸ್.ಎಲ್.ಸಿ ಹಾಗೂ ಪಿ. ಯು.ಸಿಯಲ್ಲಿ ಉತ್ತಮ ಅಂಕಗಳನ್ನು ಪಡೆದ ಮಕ್ಕಳಿಗೆ ಸನ್ಮಾನ ಮಾಡಲಾಯಿತು ಮತ್ತು ಏಕ ಪಾಲಕ ಮಕ್ಕಳಿಗೆ ಶೈಕ್ಷಣಿಕ ಸಾಮಾಗ್ರಿಗಳನ್ನು ವಿತರಿಸಲಾಯಿತು. ಸಂಗಮ ಸಂಸ್ಥೆಯ ಫಲಾನುಭವಿಗಳಾದ ಶ್ರೀಯುತ ರಫೀಕ ಯಂಭತ್ನಾಳ ವೇಧಿಕೆ ಮೇಲೆ ಉಪಸ್ಥಿತರಿದರು

ಕಾರ್ಯಕ್ರಮವನ್ನು ಸಂವಿಧಾನ ಪ್ರಸ್ತಾವನೆ ಹಾಡಿನ ಮೂಲಕ ಪ್ರಾರಂಭಿಸಲಾಯಿತು. ತೇಜಸ್ವಿನಿ ಹಳ್ಳದಕೇರಿ ನಿರೂಪಿಸಿದರು, ವಿಜಯ ಬಂಟನೂರ ಸ್ವಾಗತಿಸಿದರು, ಮಲ್ಲಪ್ಪ ಹಲಗಿ ವಂದಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಹಳ್ಳಿಗಳಿಂದ ಬಂದಂತಹ ಮಹಿಳಾ ಸಂಘದ ಸದಸ್ಯರು, ವಿಶೇಷ ಚೇತನರು, ಮನ್ರೇಗಾ ಗುಂಪಿನ ಸದಸ್ಯರು ಮಕ್ಕಳು, ಕಟ್ಟಡ ಕಾರ್ಮಿಕರು ಮತ್ತು ಹಳ್ಳಿ ಅಭಿವೃದ್ಧಿ ಸದಸ್ಯರು ಭಾಗವಹಿಸಿದ್ದರು.

ಭಾಗವಹಿಸಿದ ಎಲ್ಲಾ ಸದಸ್ಯರಿಗೆ ಸಸಿಗಳನ್ನು ವಿತರಿಸಲಾಯಿತು.

# ಶೀಘ್ರ ಬಿಸಿಯೂಟ ಕೊಠಡಿ ಮತ್ತು ಕಂಪೌಂಡ ನಿರ್ಮಾಣಕ್ಕೆ ಒತ್ತಾಯ

## ಸಾವಿರಾರು ವಿದ್ಯಾರ್ಥಿಗಳೊಂದಿಗೆ ಪುರಸಭೆ ಆವರಣದಲ್ಲಿ ಧರಣೆಯ ಎಚ್ಚರಿಕೆ



**ಮಹಾಲಿಂಗಪುರ :** ತಕ್ಷಣ ಅರ್ಧಕ್ಕೆ ನಿಂತ ಬಿಸಿಯೂಟ ಕೊಠಡಿ ಮತ್ತು ಕಂಪೌಂಡ ಕಾಮಗಾರಿಯನ್ನು ಪೂರ್ಣಗೊಳಿಸದಿದ್ದರೆ 1040 ಮಕ್ಕಳನ್ನು ಪುರಸಭೆಗೆ ಕರೆದುಕೊಂಡು ಬಂದು ಪುರಸಭೆಯ ಆವರಣದಲ್ಲಿಯೇ ಬಿಸಿಯೂಟ ತಯಾರಿಸುವ ಮೂಲಕ ಬೃಹತ್ ಪ್ರತಿಭಟನೆ ನಡೆಸಲಾಗುವದು ಎಂದು ಬಸವಾನಂದ ಶಾಲೆಯ ಮುಖ್ಯ ಶಿಕ್ಷಕ ಎಸ್.ಕೆ.ಗಿಂಡೆ ಹೇಳಿದರು.

ಬುಧವಾರ ಶಾಲೆಯ ಆಡಳಿತಮಂಡಳಿ ಸದಸ್ಯರು ಮತ್ತು ಸಹ ಶಿಕ್ಷಕರೊಂದಿಗೆ ಪುರಸಭೆ ವ್ಯವಸ್ಥಾಪಕ ಎಸ್.ಎನ್.ಪಾಟೀಲ, ಕಿರಿಯ ಅಭಿಯಂತರ ಎಸ್.ಎಂ.ಕಲಬುರ್ಗಿ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು ಪಟ್ಟಣದ ಮಹಾಲಿಂಗೇಶ್ವರ ದೇವಸ್ಥಾನದ ಹಿಂಭಾಗದ ರಸ್ತೆಯ ಅಗಲೀಕರಣಕ್ಕಾಗಿ 2020 ಫೆಬ್ರುವರಿಯಲ್ಲಿ ಮುಂಚಿತವಾಗಿ ಯಾವುದೇ ನೋಟಿಸ್ ನೀಡದೇ, ಪುರಸಭೆಯ ಅಧಿಕಾರಿಗಳು ಮತ್ತು ಸದಸ್ಯರು, ರಸ್ತೆ ಅಗಲೀಕರಣದ ನಂತರ ಶಾಲೆಯ ಎರಡು ಅಂತಸ್ತಿನ ಅಕ್ಷರ ದಾಸೋಹ(ಅಡುಗೆ) ಕೊಠಡಿ ಮತ್ತು ಕಂಪೌಂಡ್‌ನ್ನು ನಿರ್ಮಿಸಿ ಕೊಡುವ ಷರತ್ತಿನೊಂದಿಗೆ ತೆರವುಗೊಳಿಸಿದ ಪುರ ಸಭೆಯವರು ನಾಲ್ಕು ವರ್ಷಗಳಾದರೂ ಬಿಸಿಯೂಟ ಕೊಠಡಿ ಮತ್ತು ಕಂಪೌಂಡನ್ನು ನಿರ್ಮಿಸುತ್ತಿಲ್ಲ ಎಂದರು.

ಬಸವಾನಂದ ಶಿಕ್ಷಣ ಸಂಸ್ಥೆಯ ಡಾ.ಬಿ.ಡಿ.ಸೋರಗಾಂವಿ ಮಾತನಾಡಿ 2022ರಲ್ಲಿ ಶಾಸಕರ ಅನುದಾನದಲ್ಲಿ ಬಿಸಿಯೂಟ ಕೊಠಡಿಯನ್ನು ಪ್ರಾರಂಭಿಸಿ ಬಾರಾ ಕಮಾನಿನಂತೆ ಅರ್ಧಕ್ಕೆ ನಿಲ್ಲಿಸಿದ್ದಾರೆ.ಕೊಠಡಿ ಇಲ್ಲದ ಕಾರಣ ಸರ್ಕಾರದ ಬಿಸಿಯೂಟ ಮತ್ತು ಕ್ಷೀರ ಭಾಗ್ಯ ಯೋಜನೆಗಳ ಅನುಷ್ಟಾನಕ್ಕೆ ತೊಂದರೆಯಾಗುತ್ತಿದೆ. ಕಂಪೌಂಡ ಇಲ್ಲದ ಕಾರಣ ರಾತ್ರಿ ಶಾಲಾ ಆವರಣದಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ.

ಪುರಸಭೆ ಹಿಂದಿನ ಅಧ್ಯಕ್ಷ ಬಸವರಾಜ ಹಿಟ್ಟಿನಮಠ ಅವಧಿಯಲ್ಲಿ ನಗರೋತ್ಥಾನ ಕಾಮಗಾರಿಯಲ್ಲಿ ಕಟ್ಟಡ ನಿರ್ಮಿಸಲು ಡಿಸಿಯವರು ಆದೇಶಿಸಿದ ಪತ್ರ ನೀಡಿದ್ದಿರಿ ಹೊರತು ಈವರೆಗೆ ಕಾಮಗಾರಿ ಪ್ರಗತಿ ಇಲ್ಲ. ಇನ್ನು 21 ದಿನದೊಳಗೆ ಸದರಿ ಕಾಮಗಾರಿ ಆರಂಭಿಸದಿದ್ದರೆ ಸಾವಿರಾರು ಮಕ್ಕಳೊಂದಿಗೆ ಪುರಸಭೆ ಆವರಣದಲ್ಲಿ ಧರಣಿ ಮಾಡುತ್ತೇವೆ ಎಂದು ಪುರಸಭೆ ಅಧಿಕಾರಿಗಳಿಗೆ ಎಚ್ಚರಿಕೆಯ ಗಡುವು ನೀಡಿದರು.

ಬಸವಾನಂದ ಟ್ರಸ್ಟ್ ಕಮಿಟಿ ಅಧ್ಯಕ್ಷರಾದ ಬೀದರ ಶಿವಕುಮಾರ ಸ್ವಾಮಿಜಿ, ಉಪಾಧ್ಯಕ್ಷ ಬಸವರಾಜ ಢಪಳಾಪೂರ, ಕಾರ್ಯದರ್ಶಿ ಎಂ.ಎಂ.ಕಟಗಿ, ಸದಸ್ಯರಾದ ಪ್ರಭು ಬೆಳಗಲಿ, ಕೆ.ಸಿ.ಚಿಂಚಲಿ, ಎಂ.ಪಿ.ಅಂಗಡಿ, ಶಿವಾನಂದ ತಾಳಿಕೋಟಿ, ಯಲ್ಲಪ್ಪ ಹಟ್ಟಿ, ಡಾ.ಅಜೀತ ಕನಕರಡ್ಡಿ, ಚನ್ನಪ್ಪ ಪಟ್ಟಣಶೆಟ್ಟಿ, ಶಿಕ್ಷಕರಾದ ವೈ.ಎ.ಮಗದುಮ್, ಸಿ.ವ್ಹಿ. ಹುಣಶ್ಯಾಳ, ಶ್ರೀನಿವಾಸ ಕಾಂಬಳೆಕರ, ಎಸ್. ಎಂ.ಮೂಗಖೋಡ ಸೇರಿದಂತೆ ಹಲವರು ಪುರಸಭೆಯ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಶೀಘ್ರ ಶಾಲೆಯ ಕಾಮಗಾರಿಯನ್ನು ಮುಗಿಸಬೇಕೆಂದು ಒತ್ತಾಯಿಸಿದ್ದಾರೆ.

**ಚರಂಡಿಯಂತಾದ ರಸ್ತೆ :** ಈವರೆಗೂ ಶಾಲೆಯ ಮುಂದೆ ರಸ್ತೆಯ ಕಾಮಗಾರಿಯು ನಡೆದಿಲ್ಲ. ಈಗ ಮಳೆಗಾಲವಾದ್ದರಿಂದ ರಸ್ತೆಯಲ್ಲಿ ತಗ್ಗುಗುಂಡಿಗಳು ಬಿದ್ದು, ನೀರು ನಿಂತು ವಿದ್ಯಾರ್ಥಿಗಳು ಶಾಲೆಗೆ ಬರುವಾಗ, ಹೋಗುವಾಗ ಕಾಲು ಜಾರಿ ಬೀಳುತ್ತಿದ್ದಾರೆ. ತಾತ್ಕಾಲಿಕವಾಗಿ ರಸ್ತೆಗೆ ಗರಸು ಹಾಕಿ ದುರಸ್ಥಿಗೊಳಿಸಬೇಕೆಂದು ಪುರಸಭೆ ಅಧಿಕಾರಿಗಳಿಗೆ ಶಾಲಾ ಶಿಕ್ಷಕರು ಒತ್ತಾಯಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State